ಸಂಪುಟ : 8 ಸಂಚಿಕೆ : 170 ಪುಟ : 4 ಬೆಲೆ : 3.00 ಬುಧವಾರ ಆಗಸ್ಟ್ 09, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 170 Pages : 4 Price : 3.00 Wednesday August 09, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಆಗಸ್ಟ್ 9 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:**

ವಾರ್ಡ್- ನಂ. 22ರ ಅಮರೇಶ್ವರ ನಗರ, ವಾರ್ಡ್- ನಂ. 03ರ ಜಮಾದಾರ ಲೈನ್, ಬಾಳಿಕಾಯಿ ಲೈನ್, ಮಸೀದಿ ಲೈನ್, ಬಾರಕೇರ ಲೈನ್, ವಾರ್ಡ್- ನಂ. 28ರ 3ನೇ ಕ್ರಾಸ್, 4ನೇ ಕ್ರಾಸ್, 5ನೇ ಕ್ರಾಸ್, 6ನೇ ಕ್ರಾಸ್ ಪಂಚಾಕ್ಷರಿ ನಗರ, ನಾಗರಕಟ್ಟಿಯವರ ಲೈನ್, ಅಕ್ಕಿಯವರ ಲೈನ್, ದೇವಗಿರಿ ಮಾಸ್ತರ್ ಲೈನ್, ಪಂಪ ಹೌಸ್, ಕಿರಾಣಿ ಲೈನ್, ಎಸ್.ಎಸ್. ಪಾಟೀಲ, ಕಾಗದಗಾರ ಲೈನ್,

ವಾರ್ಡ್- ನಂ. 21, 22, 23, ರಲ್ಲಿ ಗಣಪತಿ ಲೈನ್, ಗೆಳೆಯರ ಬಳಗ, ಅಕ್ಕಿಯವರ ಲೈನ್, ಜಂತ್ಲಿ ಹಳೆಲೈನ್, ಹೊಸ ಲೈನ್, ಕಣಗಿನಹಾಳ ಹಾರೂಗೇರಿ ಭಾಗ-1, ಭಾಗ-2 ಹೊನ್ನತ್ತೆಮ್ಮನ ಗುಡಿ ಭಾಗ-1, ಭಾಗ-2 ಸೋಮನಗೌಡ್ರ ಹೆಬಸೂರ ಲೈನ್, ಬನ್ನಿಕಾಳಮ್ಮ, ಕಮತರ ಲೈನ್,

ವಾರ್ಡ್- ನಂ. 27 ಘಾರಂ ಓಣಿ, ಕಾಶಿ ವಿಶ್ವನಾಥ ನಗರ, ಸಂಭಾಪೂರ ರೋಡ್, ವಾರ್ಡ್- ನಂ. 30ರ ಟಿ.ವಿ.ಎಸ್ ಶೋ ರೂಮ್, ಅಬ್ಬಿಗೇರಿ ಲೇಔಟ್, ಮುತ್ತಿನಪೆಂಡಿಯವರ ಲೈನ್, ಕಾಶಿಯವರ ಲೈನ್, ವಾರ್ಡ್- ನಂ. 6, 7 ಮಳಲಿಯವರ ಲೈನ್, ಪೂಜಾರ ಲೈನ್, ತಟ್ಟಿಯವರ ಲೈನ್, ಪಂಚರತ್ನ ಬಡಾವಣೆ

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗದಗ ಶಹರ ನ್ಯಾಯಬೆಲೆ ಅಂಗಡಿಯವರಿಗೆ ಎಚ್ಚರಿಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ನೇರ ನಗದು ಹಣ ವರ್ಗಾವಣೆ ಕುರಿತು ಗದಗ ಪಡಿತರ ಪ್ರದೇಶದ ( ಶಹರ) ನ್ಯಾಯಬೆಲೆ ಅಂಗಡಿಯವರು ಪಡಿತರ ಫಲಾನುಭವಿಗಳಿಗೆ ಸರಿಯಾದ ಮಾಹಿತಿ ನೀಡದೇ ಇರುವುದು ಹಾಗೂ ನ್ಯಾಯಬೆಲೆ ಅಂಗಡಿಗಳನ್ನು ನಿಗದಿತ ಸಮಯದಲ್ಲಿ ತೆರೆಯದೆ ಇರುವುದು ಹಾಗೂ ಸಾರ್ವಜನಿಕರೊಂದಿಗೆ ಸರಿಯಾಗಿ ಸ್ಪಂದಿಸದೇ ಇರುವ ದೂರುಗಳು ಸ್ವೀಕೃತವಾಗಿರುತ್ತದೆ.

ಜಿಲ್ಲೆಯಲ್ಲಿ ಎಲ್ಲ ನ್ಯಾಯಬೆಲೆ ಅಂಗಡಿಗಳನ್ನು ಬೆ.8 ಗಂಟೆಯಿಂದ ಮ.1 ಗಂಟೆಯವರೆಗೆ ಹಾಗೂ ಸಂಜೆ 4 ಗಂಟೆಯಿಂದ 8 ಗಂಟೆಯವರೆಗೆ ತೆರೆದಿರಬೇಕು. ಪಡಿತರವನ್ನು ನಿಯಮಾನುಸಾರವಾಗಿ ಹಂಚಿಕೆ ಮಾಡುವುದು. ನೇರ ನಗದು ಹಣ ವರ್ಗಾವಣೆ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕಾಗಿ ಫಲಾನುಭವಿಗಳು/ಸಾರ್ವಜನಿಕರು ನ್ಯಾಯಬೆಲೆ ಅಂಗಡಿಗಳಿಗೆ ಆಗಮಿಸಿದಾಗ ಅವರಿಗೆ ನ್ಯಾಯಬೆಲೆ ಅಂಗಡಿ ಹಂತದಲ್ಲಿ ಆಗುವ ಪರಿಹಾರಗಳನ್ನು ( ಇ- ಕೆವೈಸಿ ಇತರೆ) ತಕ್ಷಣವೇ ಮಾಡುವುದು, ವಿನಾಕಾರಣ ಕಚೇರಿಗಳಿಗೆ ಅಲೆದಾಡಿಸುವಂತಿಲ್ಲ.

ನ್ಯಾಯಬೆಲೆ ಅಂಗಡಿಯವರು ಯಾವುದೇ ರೀತಿಯ ಸಹಕರಿಸದೆ ಇದ್ದಲ್ಲಿ ಅಥವಾ ಕಚೇರಿಗಳಿಗೆ ಅಲೆದಾಡಿಸುತ್ತಿರುವುದು ಕಂಡು ಬಂದಲ್ಲಿ ಹಾಗೂ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಯಾವುದೇ ನೋಟಿಸ್ ನೀಡದೇ ಅಮಾನತ್ತುಗೊಳಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

## ಸಹಾಯ ಕ್ರಿಕೆಟ್ ತರಬೇತುದಾರರಾಗಲು ಅರ್ಜಿ ಆಹ್ವಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಕ್ರಿಕೆಟರ್ಸ್ ಕ್ಲಬ್‌ನಲ್ಲಿ ಸಹಾಯಕ ಕ್ರಿಕೆಟ್ ತರಬೇತುದಾರರಾಗಲು 25-40 ವಯೋಮಿತಿಯೊಳಗಿನ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ ತರಬೇತಿದಾರರು ಹಾಗೂ ಬಿಸಿಸಿಐ ಲೇವಲ್ ಒನ್ ಅಂಪೈರ್ ಆಗಿರುವ ಮಲ್ಲಿಕಾರ್ಜುನ ಬಿ ಅವರೊಂದಿಗೆ ಸಹಾಯ ಕ್ರಿಕೆಟ್ ತರಬೇತುದಾರರಾಗಲು ಇಚ್ಛೆಯುಳ್ಳ ಆಸಕ್ತ ಕ್ರಿಕೆಟ್ ಕ್ರೀಡಾಪಟುಗಳಿಗೆ ಉಚಿತ ತರಬೇತಿ ನೀಡಿ, ಆಯ್ಕೆಯಾದ ಕ್ರಿಡಾಪಟುಗಳಿಗೆ ಮಾಸಿಕ ವೇತನದ ಮೇರೆಗೆ ಸಹಾಯ್ಯ ಕೋಚ್ ಹುದ್ದೆ ನೀಡಲಾಗುವುದು ಎಂದು ಮಲ್ಲಿಕಾರ್ಜುನ ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತರು-9886466390, 8431080810 ಸಂಪರ್ಕಿಸಲು ಕೋರಲಾಗಿದೆ.

## ಎದೆಹಾಲು ಪ್ರತೀ ಮಗುವಿನ ಹಕ್ಕು



■ ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ ದುಂಡಪ್ಪ ಮಾನ್ವಿ ತಾಯಿ-ಮಕ್ಕಳ ಆಸ್ಪತ್ರೆಯಲ್ಲಿ ಸಂಕನೂರು ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಸ್ತನ್ಯಪಾನದಿಂದ ಆಗುವ ಮಹತ್ವವನ್ನು ತಿಳಿಸಿದರು. ತಾಯಂದಿರು ಎದೆಹಾಲುಣಿಸುವುದರಿಂದ ಹಸುಗೂಸು ಆರೋಗ್ಯದಿಂದ ಬೆಳೆಯುವುದಲ್ಲದೇ ರೋಗ ನಿರೋಧಕ ಶಕ್ತಿ ವೃದ್ಧಿಸುತ್ತದೆ ಎಂದು ಆಸ್ಪತ್ರೆಯ ವೈದ್ಯೆ ಡಾ. ಸುನಿತಾ ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ ಡಾ. ಶಿವಲೀಲಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಎದೆಹಾಲು ನೀಡುವುದರಿಂದ ಸೌಂದರ್ಯಕ್ಕೆ ಧಕ್ಕೆಯಾಗುವುದೆಂದು ಬಾಟಲ್ ಹಾಲು ಕುಡಿಸುತ್ತಿರುವುದು ಕಂಡುಬರುತ್ತಿದೆ. ಆದರೆ, ಎದೆಹಾಲು ಪ್ರತಿ ಮಗುವಿನ ಹಕ್ಕು. ಯಾವುದೇ ಮಗು ಎದೆ ಹಾಲಿನಿಂದ ವಂಚಿತವಾಗಬಾರದು ಎಂದು ಹೇಳಿದರು. ▶▶3 ನೇ ಪುಟಕ್ಕೆ

### 'ಗೃಹಜ್ಯೋತಿ' ಯೋಜನೆಗೆ ಚಾಲನೆ ನೀಡಿದ ಸಚಿವ ಎಚ್ ಕೆ ಪಾಟೀಲ

# ಬಡವರ ಕಲ್ಯಾಣಕ್ಕೆ ನಮ್ಮ ಸರಕಾರ ಸದಾ ಬದ್ಧ






■ ವಿಜಯಸಾಕ್ಷಿ ಸುದ್ದಿ, ಗದಗ

ಜಗತ್ತಿನಲ್ಲಿ ಬಡವರನ್ನು ಮೇಲ್ಮಟ್ಟಕ್ಕೇರಿಸುವ ಮೂಲಕ ಕ್ರಾಂತಿಕಾರಕ ಕೆಲಸ ಮಾಡಿದ ಹೆಗ್ಗಳಿಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಸಲ್ಲುತ್ತದೆ. ರಾಜ್ಯ ಸರ್ಕಾರ ಜಾರಿಗೊಳಿಸಿದ ಮಹತ್ವಾಕಾಂಕ್ಷಿ, ಜನಪರ ಯೋಜನೆಗಳಿಂದ ವರ್ಷದಲ್ಲಿ ಬಡ ಕುಟುಂಬವೊಂದಕ್ಕೆ 60 ಸಾವಿರ ರೂ ಹಣ ತಲುಪಿಸುವ ಮಹತ್ತರ ಕಾರ್ಯವನ್ನು ರಾಜ್ಯದಲ್ಲಿ ಮಾಡಲಾಗುತ್ತಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ನುಡಿದರು.

ನಗರದ ಪರಿಸರ ಲೇಔಟ್‌ನಲ್ಲಿರುವ ಭಾರತ ರತ್ನ ಪಂ. ಭೀಮಸೇನ ಜೋಶಿ ರಂಗಮಂದಿರದಲ್ಲಿ ಮಂಗಳವಾರ ಇಂಧನ ಇಲಾಖೆ ವತಿಯಿಂದ ಆಯೋಜಿಸಲಾದ ಉಚಿತ ಬೆಳಕು, ಸುಸ್ಥಿರ ಬದುಕು 'ಗೃಹಜ್ಯೋತಿ' ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹೆಸ್ಕಾಂ ವಿಭಾಗದ 7 ಜಿಲ್ಲೆಗಳ 30 ಲಕ್ಷ ಮನೆಗಳಿಗೆ 1600 ಕೋಟಿ ರೂ.ಗಳ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಪ್ರತಿ ವರ್ಷ 10 ಸಾವಿರ ಕೋಟಿ ರೂ. ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಈ ಹಿಂದೆ ವಿದ್ಯುತ್ ಖರೀದಿಯ ತಪ್ಪು ನೀತಿಯಿಂದಾಗಿ 3000 ಕೋಟಿ ರೂ. ಅನಗತ್ಯವಾಗಿ ನಷ್ಟ ಉಂಟಾಗಿದೆ. ಮುಂದಿನ ವರ್ಷದಿಂದತ್ಯಿಂತಹ ನಷ್ಟ ಉಂಟಾಗುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಶೇ.90ರಷ್ಟು, ಗದಗ ವಿಧಾನಸಭಾ ಕ್ಷೇತ್ರದ ಗದಗ-ಬೆಟಗೇರಿ ಶಹರದಲ್ಲಿ ಶೇ.80, ಗ್ರಾಮೀಣ ಭಾಗದಲ್ಲಿ ಶೇ.91ರಷ್ಟು ನೋಂದಣಿಯಾಗಿದ್ದು, ಇದೇ ತಿಂಗಳಿನಿಂದ ಗೃಹಜ್ಯೋತಿಯ ಲಾಭ ಪಡೆಯಲಿದ್ದಾರೆ. ಗೃಹಜ್ಯೋತಿ ಯೋಜನೆ ಗದಗ ಜಿಲ್ಲೆಯಲ್ಲಿ ವಿಧ್ಯುಕ್ತವಾಗಿ ಇಂದು ಚಾಲನೆ ನೀಡಲಾಗಿದ್ದು, ಯೋಜನೆಯ ಸದುಪಯೋಗವನ್ನು ಪಡೆದುಕೊಂಡು ಇದರಿಂದ ಉಳಿತಾಯವಾದ ▶▶3ನೇ ಪುಟಕ್ಕೆ

> ನಮ್ಮ ಸರ್ಕಾರ ಚುನಾವಣೆ ಸಂದರ್ಭದಲ್ಲಿ ನೀಡಿದ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಬಡವರ ಬದುಕಿನ ಆರ್ಥಿಕ ಗುಣಮಟ್ಟವನ್ನು ಉನ್ನತ ಮಟ್ಟಕ್ಕೆ ಒಯ್ಯುತ್ತಿದೆ. ನಿಮ್ಮ ಖುಷಿಯೊಂದಿಗೆ ನಾವು ಖುಷಿಯಾಗಿದ್ದೇವೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹಗಲಿರುಳು ಶ್ರಮಿಸುವ ಮೂಲಕ ಕೊಟ್ಟ ಮಾತಿನಂತೆ ನಡೆಯುತ್ತಿದೆ. ನಮ್ಮ ನೀತಿ, ತತ್ವ ಹಾಗೂ ಸರಕಾರ ಯಾರಿಗಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಟೀಕಾಕಾರರು ಅರ್ಥೈಸಿಕೊಳ್ಳಬೇಕಿದೆ. ಬಡವರ ಕಲ್ಯಾಣ ಕೆಲಸಗಳಿಗೆ ನಮ್ಮ ಸರಕಾರ ಎಂದಿಗೂ ಬದ್ಧವಾಗಿದೆ.
>
> **- ಎಚ್ ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

### ಸಚಿವರ ಕೈಸೇರಿದ ಗದಗ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಯೋಜನೆಯ ವರದಿ

# ಜಿಲ್ಲೆಯ ಹಿರಿಮೆಯನ್ನು ದೇಶ-ವಿದೇಶಕ್ಕೆ ಪರಿಚಯಿಸಲು ಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ನೈಸರ್ಗಿಕ ಸಂಪತ್ತು ಮತ್ತು ಪಾರಂಪರಿಕ ಸ್ಥಳಗಳ ವೈಶಿಷ್ಟ್ಯತೆ ಕುರಿತು ದೇಶದಲ್ಲಿಯೇ ತನ್ನದೇ ಆದ ಸ್ಥಾನಮಾನವನ್ನು ಗದಗ ಜಿಲ್ಲೆ ಹೊಂದಿದೆ. ಗದಗ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಯೋಜನೆಯನ್ನು ನಿಖರವಾಗಿ ತಯಾರಿಸಿ, ಸಲ್ಲಿಸಿದ ಸಮಿತಿಗೆ ಸರ್ಕಾರದ ವತಿಯಿಂದ ಅಭಿನಂದನೆಗಳು ಎಂದು ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ನುಡಿದರು.

ಪ್ರವಾಸೋದ್ಯಮ ಇಲಾಖೆಯಿಂದ ಗದಗ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮಿತಿ ರಚಿಸಿ, ಯೋಜನೆಯ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ, ಸತತ ಎರಡು ತಿಂಗಳುಗಳ ಕಾಲ ಜಿಲ್ಲೆಯ ಅಧ್ಯಯನ ನಡೆಸಿದ ಹಿರಿಯ ಅಧಿಕಾರಿ ಮನೋಜ ಕುಮಾರ ನೇತೃತ್ವದ ಸಮಿತಿಯು ಅಧ್ಯಯನ ವರದಿಯನ್ನು ಮಂಗಳವಾರ ಲಕ್ಕುಂಡಿಯ ಕುಂಬಾರೇಶ್ವರ ದೇವಸ್ಥಾನದಲ್ಲಿ ಪ್ರವಾಸೋದ್ಯಮ ಸಚಿವ ಎಚ್ ಕೆ ಪಾಟೀಲರಿಗೆ ಸಲ್ಲಿಸಿತು. ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

ಜಿಲ್ಲೆಯ ಕಪ್ಪತಗುಡ್ಡ, ಲಕ್ಕುಂಡಿ, ಡಂಬಳ, ಮಾಗಡಿ ಕೆರೆ, ತ್ರಿಕೂಟೇಶ್ವರ ದೇವಾಲಯ, ವೀರನಾರಾಯಣ ದೇವಸ್ಥಾನ, ಶಿರಹಟ್ಟಿಯ ಭಾವೈಕ್ಯತೆಯ ಕೇಂದ್ರ ಮುಂತಾದ ಪ್ರವಾಸಿ ಕೇಂದ್ರಗಳು ಶಿಕ್ಷಣ ಹಾಗೂ ನೆಮ್ಮದಿ ನೀಡುವ ತಾಣಗಳಾಗಿವೆ. ಈ ಎಲ್ಲ ಪ್ರಸಿದ್ಧ ಪ್ರವಾಸಿ ತಾಣಗಳನ್ನು ವರದಿಯಲ್ಲಿ ಉಲ್ಲೇಖಿಸಿ, ಅಭಿವೃದ್ಧಿಪಡಿಸಲು ಯೋಜನೆ ಸಿದ್ಧಪಡಿಸಿ ನೀಡಲಾಗಿದೆ. ವರದಿ ಅನುಸಾರ ▶▶3ನೇ ಪುಟಕ್ಕೆ

> 804 ಕೋಟಿ ರೂ.ಗಳ ಅಂದಾಜು ಮೊತ್ತದ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಿ ಮಂಡಿಸಿದ್ದು, ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಶಿಫಾರಸ್ಸುಗಳನ್ನು ಮಾಡಲಾಗಿದೆ. ಜಿಲ್ಲೆಯ ಪ್ರಮುಖ ತಾಣಗಳು ಯುನೆಸ್ಕೋದ ಪಾರಂಪರಿಕ ಪಟ್ಟಿಯಲ್ಲಿ ಬರುವಂತಹ ವೈಶಿಷ್ಟ್ಯತೆ ಹೊಂದಿದೆ. ವರದಿಯು ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲು ಸುಲಭವಾಗಲು ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವದಿ ಕಾಲದ ಯೋಜನೆಗಳನ್ನು ನೀಡಿದ್ದು ಅನುಷ್ಠಾನಕ್ಕೆ ಸಹಕಾರಿಯಾಗಿದೆ.
>
> **- ಎಚ್ ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

### 'ಕೂಸಿನ ಮನೆ'ಯ ಕೇರ್ ಟೇಕರ್‌ಗಳ ತರಬೇತಿಗೆ ಚಾಲನೆ ನೀಡಿದ ಸಿ ಆರ್ ಮುಂಡರಗಿ

# ತರಬೇತಿಯ ಸಂದೇಶಗಳನ್ನು ವೃತ್ತಿಯಲ್ಲಿ ಪಾಲಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಮೂರು ವರ್ಷದೊಳಗಿನ ಮಕ್ಕಳ ಆರೈಕೆಯ ದೃಷ್ಟಿಯಿಂದ ಸರ್ಕಾರ 'ಕೂಸಿನ ಮನೆ' ಎಂಬ ವಿಶೇಷ ಯೋಜನೆಯನ್ನು ಜಾರಿಗೆ ತಂದಿದ್ದು, ಅದರ ಪೂರ್ವಭಾವಿಯಾಗಿ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಒಳ್ಳೆಯ ಸಲಹೆ-ಸಂದೇಶಗಳನ್ನು ನೀಡುತ್ತಾರೆ. ಅವುಗಳನ್ನು ಗಮನವಿಟ್ಟು ಕೇಳಬೇಕು. ಒಂದೊಳ್ಳೆಯ ಮಾತು, ಒಂದೊಳ್ಳೆಯ ಸಂದೇಶ ವ್ಯಕ್ತಿಯ ಜೀವನದ ಪಥವನ್ನೇ ಬದಲಿಸಬಹುದು. ಈ ಹಿನ್ನೆಲೆಯಲ್ಲಿ ತರಬೇತಿಯಲ್ಲಿ ಆಲಿಸಿದ ಸಂದೇಶಗಳನ್ನು ನೆನಪಿನಲ್ಲಿಟ್ಟುಕೊಂಡು ವೃತ್ತಿಯಲ್ಲಿ ಪಾಲಿಸಬೇಕು ಎಂದು ಗದಗ ಜಿ ಪಂ ಉಪಕಾರ್ಯದರ್ಶಿ ಸಿ ಆರ್ ಮುಂಡರಗಿ ಹೇಳಿದರು.

ತಾಲೂಕಿನ ಸಾಮರ್ಥ್ಯ ಸೌಧದಲ್ಲಿ ಮಂಗಳವಾರ ಗದಗ ಹಾಗೂ ಮುಂಡರಗಿ ತಾ ಪಂ ವತಿಯಿಂದ ಆಯೋಜಿಸಿದ್ದ 'ಕೂಸಿನ ಮನೆ' ಕೇರ್ ಟೇಕರ್‌ಗಳ ನಾಲ್ಕು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗದಗ ತಾ ಪಂ ಸಹಾಯಕ ನಿರ್ದೇಶಕ ಕುಮಾರ ಪೂಜಾರ ಮಾತನಾಡಿ, ಮಕ್ಕಳ ಆರೈಕೆ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಕೂಸಿನ ಮನೆಗಳನ್ನು ಆರಂಭಿಸಲಾಗುತ್ತಿದೆ. ಕೂಸಿನ ಮನೆ ಮುತುವರ್ಜಿಗಾಗಿ ▶▶3ನೇ ಪುಟಕ್ಕೆ

### ವರ್ಗಾವಣೆಗೊಂಡ ಶಿರಹಟ್ಟಿ ಸಿಪಿಐ ವಿಕಾಸ್ ಲಮಾಣಿಯವರಿಗೆ ಆತ್ಮೀಯ ಬೀಳ್ಕೊಡುಗೆ

# ಲಮಾಣಿಯವರ ಸೇವೆ ಮತ್ತೆ ಜಿಲ್ಲೆಗೆ ಲಭಿಸಲಿ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಈ ಹಿಂದೆ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ಪೊಲೀಸ್ ಠಾಣೆಗಳಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸಿ, ಪದೋನ್ನತಿ ಹೊಂದಿ ಶಿರಹಟ್ಟಿ ಸಿಪಿಐ ಆಗಿ ಸುದೀರ್ಘ ಜನಸ್ನೇಹಿ ಆಡಳಿತ ನೀಡಿ, ಸಾರ್ವಜನಿಕ ವಲಯದಲ್ಲಿ ಪ್ರಶಂಸೆಗೆ ಪಾತ್ರವಾಗಿದ್ದ ಶಿರಹಟ್ಟಿ ಸಿಪಿಐ ವಿಕಾಸ್ ಲಮಾಣಿ ಅವರಿಗೆ ವರ್ಗಾವಣೆಯಾದ ನಿಮಿತ್ತ ಶಿರಹಟ್ಟಿ-ಲಕ್ಷ್ಮೇಶ್ವರ ಪೊಲೀಸ್ ಠಾಣೆಗಳ ಸಿಬ್ಬಂದಿ ಮತ್ತು ವಿವಿಧ ಮುಖಂಡರು ಆತ್ಮೀಯಯಾಗಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಶಿರಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ, ಬಿಜೆಪಿ ತಾಲೂಕಾಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ಬೆಳ್ಳಟ್ಟಿ ಗ್ರಾ ಪಂ ಸದಸ್ಯ ತಿಮ್ಮರಡ್ಡಿ ಮರಡ್ಡಿ, ಸಿಪಿಐ ವಿಕಾಸ್ ಲಮಾಣಿಯವರು ಪೊಲೀಸ್ ಠಾಣೆಗೆ ನೊಂದು ಬಂದವರ ಸಂಕಷ್ಟಗಳನ್ನು ಆಲಿಸಿ, ಅವರಿಗೆ ತ್ವರಿತಗತಿಯಲ್ಲಿ ನ್ಯಾಯ ಕಲ್ಪಿಸುತ್ತಿದ್ದರು. ಎರಡೂ ತಾಲೂಕುಗಳ ಪ್ರತಿಯೊಂದು ಹಳ್ಳಿಯಲ್ಲಿಯೂ ಸಹ ಶಾಂತಿ-ಸುವ್ಯವಸ್ಥೆ ಕಾಪಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದರು. ಅನೇಕ ಜಾತ್ರಾ ಮಹೋತ್ಸವ, ಹಬ್ಬ-ಹರಿದಿನಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಿ ಜನಮಾನಸದಲ್ಲಿ ತಮ್ಮ ಕಾರ್ಯವೈಖರಿಯಿಂದ ಪ್ರಶಂಸೆಗೆ ಪಾತ್ರರಾಗಿದ್ದರು. ಇದೀಗ ವರ್ಗಾವಣೆಗೊಂಡಿರುವುದು ತುಂಬಾ ಬೇಸರ ತಂದಿದೆ. ಮುಂದಿನ ದಿನಮಾನಗಳಲ್ಲಿ ಇಲಾಖೆಯಲ್ಲಿ ಇನ್ನೂ ಉನ್ನತ ಸ್ಥಾನ ಅವರಿಗೆ ಲಭಿಸಲಿ. ಜ.ಫಕೀರೇಶ್ವರರ ಆಶೀರ್ವಾದದಿಂದ ಮತ್ತೆ ಜಿಲ್ಲೆಗೆ ಬರುವಂತಾಗಲಿ ಎಂದರು.

ತಹಸೀಲ್ದಾರ ಅನಿಲ ಬಡಿಗೇರ, ಪಿಎಸ್‌ಐ ಈರಣ್ಣ ರಿತ್ತಿ, ತಾ ಪಂ ಮಾಜಿ ಸದಸ್ಯರಾದ ಜಾನು ಲಮಾಣಿ, ನಿಂಬಣ್ಣ ಮಡಿವಾಳರ, ಮೋಹನ ಗುತ್ತೆಮ್ಮನವರ, ಡಿ ವೈ ಹುನಗುಂದ, ಗಂಗಾಧರ ಮೆಣಸಿನಕಾಯಿ, ಇಸಾಕ ಆದ್ರಳ್ಳಿ, ಚಾಂದಸಾಬ ಮುಳಗುಂದ, ಮಂಜುನಾಥ ಘಂಟಿ, ಮಹಾಂತೇಶ ದಶಮನಿ, ಪ್ರಕಾಶ ಬೆಂತೂರ, ಅಶ್ರತಅಲಿ ಢಾಲಾಯತ, ಸೋಮು ಲಮಾಣಿ, ಪುಂಡಲೀಕ ಲಮಾಣಿ, ಲಕ್ಷ್ಮಣ ಲಮಾಣಿ, ಎಂ ಕೆ ಲಮಾಣಿ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ರಾಯರ ಆರಾಧನೆ ನಿಮಿತ್ತ ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವ ಆಚರಣೆಯ ನಿಮಿತ್ತ ಆಗಸ್ಟ್ 13, ರವಿವಾರ ಸಾಯಂಕಾಲ 6 ಗಂಟೆಗೆ ನಗರದ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸದ್ಭಕ್ತರು ಸಭೆಯಲ್ಲಿ ಪಾಲ್ಗೊಂಡು ಸಲಹೆ ನೀಡಲು ಶ್ರೀ ಗುರು ರಾಘವೇಂದ್ರ ಸ್ವಾಮಿ ಉತ್ಸವ ಮಂಡಳಿಯು ಪ್ರಕಟಣೆಯಲ್ಲಿ ವಿನಂತಿಸಿದೆ.

## ರೈಲ್ವೆ ಮಾರ್ಗ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಮನವಿ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಗದಗ-ಶಿರಹಟ್ಟಿ-ಯಲವಿಗಿ ರೈಲ್ವೆ ಮಾರ್ಗ ಕಾಮಗಾರಿಗೆ ಸರಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪ್ರಾರಂಭಗೊಳಿಸಿ, ರೈಲ್ವೆ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಶಿರಹಟ್ಟಿಯ ರೈಲ್ವೆ ಮಾರ್ಗ ಹೋರಾಟ ಸಮಿತಿ ವತಿಯಿಂದ ಸಚಿವ ಎಚ್ ಕೆ ಪಾಟೀಲರಿಗೆ ಗದುಗಿನಲ್ಲಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಈರಣ್ಣ ಕೋಟಿ, ಗದಗ-ಶಿರಹಟ್ಟಿ-ಯಲವಿಗಿ ರೈಲ್ವೆ ಮಾರ್ಗಕ್ಕೆ ಈ ಹಿಂದೆ ಕೇಂದ್ರ ಸರಕಾರ 640 ಕೋಟಿ ರೂ ಬಿಡುಗಡೆ ಮಾಡಿದ್ದು, ಉಳಿದ ಅರ್ಧದಷ್ಟನ್ನು ರಾಜ್ಯ ಸರಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿ 4-5ವರ್ಷಗಳು ಕಳೆದಿವೆ. ಆದರೆ, ಇದುವರೆಗೂ ಯಾವುದೇ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ರೈಲ್ವೆ ಇಲಾಖೆಯ ಅಧಿಕಾರಿಗಳು ರಾಜ್ಯ ಸರಕಾರಕ್ಕೆ ಭೂಸ್ವಾಧೀನ ಪ್ರಕ್ರಿಯೆಗೆ ಪತ್ರ ಬರೆಯಲಾಗಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಸಚಿವರು ಸರಕಾರದ ಮಟ್ಟದಲ್ಲಿ ಈ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಕೊಳ್ಳಬೇಕೆಂದು ವಿನಂತಿಸಿದರು.

ಉಪಾಧ್ಯಕ್ಷ ರಾಯಸಾಬ ಢಾಲಾಯತ, ಬಸವರಾಜ ಗಾಮನಗಟ್ಟಿ, ಮಹಬೂಬಸಾಬ ಕನಕವಾಡ, ಮಾನಪ್ಪ ಲಮಾಣಿ, ರಾಜೇಸಾಬ ಮಂಡಲ, ಮೈನುದ್ದೀನ್ ಢಾಲಾಯತ, ಖಾಸಿಂ ಮಕಾನದಾರ, ಚಿನ್ನು ನಡುಗಿರಿ, ರಮೇಶ ಇಟಗಿ, ಅಕ್ಬರ್ ಆದರಹಳ್ಳಿ, ಮೆಹಬೂಬಸಾಬ ಅತ್ತಾರ, ಲಿಯಾಕತ್‌ಅಲಿ ಸರಖವಾಸ, ವಿರೇಶ ಬಣಕಾರ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸಾಕ್ಷಿ ಸುಭಾಷಿತ

ಆಹಾರ, ಬೆಚ್ಚನೆಯ ಆಶ್ರಯ, ನಿದ್ರೆ ಹಾಗು ಒಂದು ಪುಸ್ತಕ- ಸದ್ದಯಕ್ಕೆ ನನಗೆ ಬೇಕಾದುದು ಇಷ್ಟೇ.
–ವಿಲಿಯಂ ಹ್ಯಾಸ್ಲಿಟ್

## ಸಂಪಾದಕೀಯ

# ಕಾಂಗ್ರೆಸ್ VS ಗುತ್ತಿಗೆದಾರರು

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರದ ಅವಧಿಯಲ್ಲಿ ಗುತ್ತಿಗೆದಾರರು ಮಾಡಿದ್ದ ಆರೋಪ ಬಹುದೊಡ್ಡ ಬದಲಾವಣೆಗೆ ಕಾರಣವಾಗಿತ್ತು. ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಬಹುಮತ ಕಳೆದುಕೊಳ್ಳುವಲ್ಲಿಯೂ ಕಮಿಷನ್ ಆರೋಪವೂ ಕೆಲಸ ಮಾಡಿದ್ದು ಸುಳ್ಳಲ್ಲ.

ಈಗ ಕಾಂಗ್ರೆಸ್ ಸರಕಾರದ ವಿರುದ್ಧವೂ ಗುತ್ತಿಗೆದಾರರು ಅಂಥದ್ದೆ ಆರೋಪ ಮಾಡುತ್ತಿದ್ದಾರೆ. ಅದರಲ್ಲೂ ಡಿಸಿಎಂ ಡಿ.ಕೆ. ಶಿವಕುಮಾರ ವಿರುದ್ಧ ಗುತ್ತಿಗೆದಾರರು ಕಮಿಷನ್ ಆರೋಪ ಮಾಡುತ್ತಿದ್ದಾರೆ. ಡಿಕೆ ಶಿವಕುಮಾರ್ ತಮ್ಮ ಮೇಲಿನ ಆರೋಪ ಸುಳ್ಳು ಎನ್ನುವುದಾದರೆ ದೇವರ ಮೇಲೆ ಆಣೆ ಪ್ರಮಾಣ ಮಾಡಲಿ ಎಂದು ಗುತ್ತಿಗೆದಾರರು ಸವಾಲು ಹಾಕುತ್ತಿದ್ದಾರೆ.

ಮತ್ತೊಂದೆಡೆ ಗುತ್ತಿಗೆದಾರರ ಸಂಘ ಬಿಬಿಎಂಪಿ ವ್ಯಾಪ್ತಿಯ ಕೆಲಸಗಳನ್ನು ಬಂದ್ ಮಾಡಿ ಸರಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಕಾಂಗ್ರೆಸ್ ಸರಕಾರದಲ್ಲಿಯೂ ಕಮಿಷನ್ ಕೇಳುತ್ತಿದ್ದಾರೆ. ಇಲ್ಲದಿದ್ದರೆ ಬಿಲ್ ತಡೆಹಿಡಿದಿದ್ದು ಏಕೆ ಎಂದು ಗುತ್ತಿಗೆದಾರರು ಪ್ರಶ್ನೆ ಮಾಡುತ್ತಿದ್ದಾರೆ.


ಈ ಹಿಂದೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಕಾಂಗ್ರೆಸ್ ನೆರವು ಪಡೆದು ಬಿಜೆಪಿ ಸರಕಾರದ ವಿರುದ್ಧ ಕಮಿಷನ್ ಆರೋಪ ಮಾಡಿದ್ದರು. ಈಗ ಜೆಡಿಎಸ್ ಮುಖಂಡ, ಮಾಜಿ ಸಿಎಂ ಕುಮಾರಸ್ವಾಮಿ ಭೇಟಿ ಮಾಡಿ ಸರಕಾರದ ವಿರುದ್ಧ ಗುತ್ತಿಗೆದಾರರು ಆಕ್ರೋಶ ಹೊರಹಾಕುತ್ತಿದ್ದಾರೆ. ಗುತ್ತಿಗೆದಾರರು ಮತ್ತು ಬಾಕಿ ಬಿಲ್ ಪಾವತಿ ವಿಷಯ ರಾಜಕೀಯಕ್ಕೆ ಬಳಕೆಯಾಗುತ್ತಿರುವುದು ಬದಲಾದ ರಾಜಕಾರಣಕ್ಕೆ ಸಾಕ್ಷಿಯಾಗಿದೆ.

ಕಮಿಷನ್ ವಿಷಯದಲ್ಲಿ ಗುತ್ತಿಗೆದಾರರು ಮತ್ತು ರಾಜಕಾರಣಿಗಳ ಮಧ್ಯೆ ಒಂದು ರೀತಿಯ ಬಾಂಧವ್ಯ, ಹೊಂದಾಣಿಕೆ ಇರುವುದು ಇದೇ ಮೊದಲೇನಲ್ಲ. ಆದರೆ ಆ ಹೊಂದಾಣಿಕೆಯ ಹಳಿ ತಪ್ಪಿದರೆ ಮಾತ್ರ ಇಂಥ ಆರೋಪ – ಪ್ರತ್ಯಾರೋಪ ಕೇಳಿ ಬರುತ್ತವೆ. ಸದ್ಯ ಆಗಿರುವುದು ಅದೇ. ಹಿಂದಿನ ಬಿಜೆಪಿ ಸರಕಾರದಲ್ಲಿ ಎಲ್ಲವೂ ಸರಿಯಾಗಿಯೇ ನಡೆಯುತ್ತಿತ್ತು. ಆಯಾ ಕಾಲಕ್ಕೆ ಹೊಂದಾಣಿಕೆಯೂ ಇತ್ತು. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಇಬ್ಬರಿಗೂ ಸಮಯ ಬೇಕು. ಅದು ಸರಿಯಾದರೆ ಮತ್ತೆ ಸುಸೂತ್ರವಾಗಿ ಕಳಪೆ ಅಭಿವೃದ್ಧಿ ಕಾಮಗಾರಿಗಳು ನಡೆಯಲು ಸಾಧ್ಯ. ಗುತ್ತಿಗೆದಾರರು ರಾಜಕಾರಣ ಅಥವಾ ಜನಪ್ರತಿನಿಧಿಗಳನ್ನು ಬಿಟ್ಟು ಕೆಲಸ ಮಾಡಲು ಸಾಧ್ಯವೇ ಇಲ್ಲ. ಇನ್ನು ಜನಪ್ರತಿನಿಧಿಗಳಾದವರೂ ಅಷ್ಟೆ, ಗುತ್ತಿಗೆದಾರರನ್ನು ಬಿಟ್ಟು ಕೆಲಸ ಮಾಡಲು ಸಾಧ್ಯವೇ ಇಲ್ಲ. ಹೀಗಾಗಿಯೇ ರಾಜಕಾರಣಿ ಸುತ್ತ ಒಬ್ಬನಾದರೂ ಗುತ್ತಿಗೆದಾರ ಕಾಣಸಿಗುತ್ತಾನೆ. ಹೀಗಾಗಿ ರಾಜ್ಯದಲ್ಲಿ ಕೇಳಿಬರುತ್ತಿರುವ ಈ ಕಮಿಷನ್ ಆರೋಪ ಕ್ಷಣಿಕ. ಆ ಬಗ್ಗೆ ಗಂಭೀರವಾಗಿ ಚಿಂತಿಸುವ ಅಗತ್ಯ ಇಲ್ಲ.

### ದೈನಂದಿನ ಜೀವನದಲ್ಲಿ ನಾವು ಮಾಡಿಕೊಳ್ಳುವ ಬದಲಾವಣೆಗಳು ನಮ್ಮ ಆರೋಗ್ಯವನ್ನು ಕಾಯುತ್ತವೆ

# ಜೀವನಶೈಲಿಯ ಬದಲಾವಣೆಯ ಅಗತ್ಯತೆ

ಇತ್ತೀಚೆಗೆ ಅತಿ ಹೆಚ್ಚು ಟ್ರೆಂಡ್‌ನಲ್ಲಿರುವ ಪದ ಎಂದರೆ, 'ಲೈಫ್ ಸ್ಟೈಲ್ ಚೇಂಜಸ್' ಎಂಬುದು. ಯಾವುದೇ ಮನೋ–ದೈಹಿಕ ತೊಂದರೆಗಳಿಗೆ ವೈದ್ಯರ ಬಳಿ ಹೋದರೂ, ಅವರು ಕೊಡುವ ಸಲಹೆ 'ಲೈಫ್ ಸ್ಟೈಲ್ ಚೇಂಜ್ ಮಾಡ್ಕೊಳ್ಳಿ' ಅಂತ. ಹಾಗಾದ್ರೆ ಏನೀ ಲೈಫ್ ಸ್ಟೈಲ್ ಚೇಂಜಸ್?!



ನಮ್ಮ ದೈನಂದಿನ ಜೀವನದಲ್ಲಿ ನಾವು ಮಾಡಿಕೊಳ್ಳುವ ಸಣ್ಣ ಪುಟ್ಟ ಬದಲಾವಣೆಗಳು ನಮ್ಮ ಆರೋಗ್ಯವನ್ನು ಕಾಯುತ್ತವೆ. ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡರೆ ಅದರ ಲಾಭಗಳು ಅಧಿಕ. ಹಾಗಾದರೆ, ಜೀವನಶೈಲಿ ಬದಲಾವಣೆಯ ಲಾಭಗಳಾದರೂ ಏನು?

* ಜೀವನಶೈಲಿ ಬದಲಾವಣೆಯಿಂದ ದೈಹಿಕವಾಗಿ ವ್ಯಕ್ತಿಯು ಸದೃಢವಾಗಿದ್ದು ಕಚೇರಿಗಳಲ್ಲಿ ಮತ್ತು ತಾನು ಕಾರ್ಯನಿರ್ವಹಿಸುವ ಸ್ಥಳಗಳಲ್ಲಿ ಉತ್ತಮ ಕ್ಷಮತೆಯನ್ನು ಹೊಂದಿರುತ್ತಾನೆ.

* ಜೀವನಶೈಲಿ ಬದಲಾವಣೆಯಿಂದ ವ್ಯಕ್ತಿಯು ಉತ್ತಮ ಮನೋ–ದೈಹಿಕ ಆರೋಗ್ಯವನ್ನು ಹೊಂದುತ್ತಾನೆ.

* ಉತ್ತಮ ಹವ್ಯಾಸಗಳನ್ನು ಹೊಂದಿದ ವ್ಯಕ್ತಿಯ ಆರೋಗ್ಯವು ಸುಸ್ಥಿತಿಯಲ್ಲಿರುತ್ತದೆ. ಇಂತಹ ವ್ಯಕ್ತಿಗಳಲ್ಲಿ ಖಾಯಿಲೆಗಳ ಕುರಿತ ಅಪಾಯದ ಭಯವಿರುವುದಿಲ್ಲ.

* ಆರೋಗ್ಯಕರ ಜೀವನ ಶೈಲಿಯನ್ನು ಹೊಂದಿರುವವರು ಆರೋಗ್ಯವಂತರಾಗಿಯೇ ಉಳಿಯುವುದರ ಜೊತೆಗೆ, ಸಾಕಷ್ಟು ಹಣವನ್ನು ಉಳಿತಾಯ ಮಾಡಬಹುದು. ಮಾನಸಿಕ ನೆಮ್ಮದಿಯನ್ನು ಕೂಡ ಪಡೆಯಬಹುದು.

* ಜೀವನಶೈಲಿಯ ಬದಲಾವಣೆಯಿಂದ ಉಂಟಾಗುವ ಉತ್ತಮ ಆರೋಗ್ಯ ಸ್ಥಿತಿಯಿಂದ ವ್ಯಕ್ತಿಯ ಜೀವಿತಾವಧಿ ಹೆಚ್ಚಾಗುತ್ತದೆ.

* ಆರೋಗ್ಯಕರ ಜೀವನ ಶೈಲಿಯು ಉತ್ತಮ ಪರಿಸರವನ್ನು ಸೃಷ್ಟಿ ಮಾಡುತ್ತದೆ.

* ಆರೋಗ್ಯಕರ ಜೀವನ ಶೈಲಿಯು ಸಂಪೂರ್ಣ ಜೀವಿತಾವಧಿಯನ್ನು ಸುಸ್ಥಿರ ಮತ್ತು ನೆಮ್ಮದಿಯ ಬದುಕನ್ನಾಗಿಸುತ್ತದೆ.

* ದೈನಂದಿನ ಜೀವನದಲ್ಲಿ ಯೋಗವನ್ನು ಅಭ್ಯಸಿಸುವುದರಿಂದ ದೈಹಿಕ ಆರೋಗ್ಯ ಸುಧಾರಿಸುತ್ತದೆ. ಸ್ನಾಯುಗಳು ಬಲಿಷ್ಠವಾಗುತ್ತವೆ, ರಕ್ತ ಪರಿಚಲನೆ ಸುಧಾರಿಸುತ್ತದೆ.

* ಪ್ರತಿನಿತ್ಯದ ವಾಕಿಂಗ್ ಮಾಡುವುದರಿಂದ ಕಾಲುಗಳ ಬಲವನ್ನು ಹೆಚ್ಚಿಸುತ್ತದೆ. ಅಧ್ಯಯನಗಳ ಪ್ರಕಾರ, ಯಾವುದೇ ರೀತಿಯ ವ್ಯಾಯಾಮಗಳನ್ನು ಮಾಡದೆ ಹೋದರೂ ದೈನಂದಿನ ನಡಿಗೆಯು ನಮ್ಮಲ್ಲಿ ಉತ್ಸಾಹವನ್ನು ಚಿಮ್ಮಿಸುತ್ತದೆ. ಆರೋಗ್ಯ ಹೆಚ್ಚಿಸುತ್ತದೆ. ದೈಹಿಕ ತೊಂದರೆಗಳನ್ನು ನಿವಾರಿಸುತ್ತದೆ. ಕೀಲು ಮತ್ತು ನರಗಳಲ್ಲಿ ಶಕ್ತಿ ತುಂಬುತ್ತದೆ.

* ಪ್ರಾಣಾಯಾಮವು ದೀರ್ಘ ಮತ್ತು ತ್ವರಿತ ಮತ್ತು ನಿಧಾನ ಗತಿಯ ಉಸಿರಾಟದ ಕ್ರಿಯೆಯನ್ನು ಹೊಂದಿದ್ದು, ಪ್ರತಿದಿನವೂ ಪ್ರಾಣಾಯಾಮ ಅಭ್ಯಾಸವನ್ನು ಕನಿಷ್ಠ 15 ನಿಮಿಷಗಳ ಕಾಲ ಮಾಡುವುದು ಅಪೇಕ್ಷಣೀಯ. ಕಪಾಲಭಾತಿ, ಬಸ್ತ್ರಿಕಾ, ಅನುಲೋಮ–ವಿಲೋಮ ಮತ್ತು ಭ್ರಮರಿ ಪ್ರಾಣಾಯಾಮಗಳು ಉಸಿರಾಟದ ಸಮಸ್ಯೆಯನ್ನು ನಿವಾರಿಸಿ ದೀರ್ಘಕಾಲೀನ ಆರೋಗ್ಯದ ಭರವಸೆಯನ್ನು ನೀಡುತ್ತವೆ. ನಿರಂತರವಾಗಿ ಅನುಲೋಮ–ವಿಲೋಮ ಅಭ್ಯಾಸ ಮಾಡುವುದರಿಂದ ಮನಸ್ಸು ಪ್ರಶಾಂತವಾಗಿ ಧ್ಯಾನಸ್ಥ ಸ್ಥಿತಿಗೆ ತಲುಪುತ್ತದೆ. ಅನುಲೋಮ–ವಿಲೋಮ ಅಭ್ಯಾಸ ಮಾಡುವುದರಿಂದ ತಮ್ಮ ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಬಹುದು.

* ಹದಿಹರೆಯದ ಮಕ್ಕಳು ಮತ್ತು ಯುವ ಜನರು ಜಿಮ್‌ಗಳಲ್ಲಿ ಬೆವರಿಳಿಸುತ್ತಾರೆ. ನುರಿತ ಜಿಮ್ ಟ್ರೈನರ್‌ಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವುದು ಉತ್ತಮ. ತ್ವರಿತ ತೂಕ ಇಳಿಕೆಗೆ ಕೂಡ ಜಿಮ್‌ನಂತಹ ಫಿಟ್ನೆಸ್ ಸೆಂಟರ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ.

* ಮಕ್ಕಳು, ಮಹಿಳೆಯರು ಎನ್ನದೆ ಎಲ್ಲರೂ ಏರೋಬಿಕ್ಸ್ ಮಾಡುವುದರಿಂದ ಮನಸ್ಸು ಉಲ್ಲಾಸದಿಂದ ಸಂಭ್ರಮಿಸುತ್ತದೆ. ಮನೋಲ್ಲಾಸಕ್ಕೆ ಕಾರಣವಾಗುವ ಡೋಪಮೈನ್‌ಗಳು ಸ್ರವಿಸಿ ವ್ಯಕ್ತಿಯ ಆರೋಗ್ಯವನ್ನು, ಹುಮ್ಮಸ್ಸನ್ನು ವೃದ್ಧಿಸುತ್ತವೆ.

ಆರೋಗ್ಯಕರ ಜೀವನ ಶೈಲಿಯಲ್ಲಿ ಆಹಾರ ಸೇವನೆಯು ಅತಿ ಮುಖ್ಯವಾಗಿರುತ್ತದೆ. ಸತ್ವಯುತ ಆಹಾರವನ್ನು ನಿಯಮಿತವಾಗಿ ಸೇವಿಸುವುದರಿಂದ ನಮ್ಮ ಆರೋಗ್ಯವನ್ನು ಕಾಪಿಟ್ಟುಕೊಳ್ಳಬಹುದು. ಸ್ಥಳೀಯವಾಗಿ ದೊರೆಯುವ ತಾಜಾ ಹಣ್ಣುಗಳ ಮತ್ತು ತರಕಾರಿಗಳ ಸೇವನೆ ಉತ್ತಮ. ಸಂಸ್ಕರಿಸಿದ, ಪ್ಯಾಕ್ ಮಾಡಲ್ಪಟ್ಟ ಮತ್ತು ಫ್ರೋಜನ್ (ಶೀತಲೀಕರಿಸಿದ) ಆಹಾರ ಪದಾರ್ಥಗಳನ್ನು ತಿರಸ್ಕರಿಸೋಣ.

ಜಂಕ್ ಫುಡ್‌ಗಳನ್ನು ತಿಂಗಳಿಗೊಮ್ಮೆ ಇಲ್ಲವೇ ಎರಡು ಬಾರಿ ಮಾತ್ರ ಸೇವಿಸುತ್ತೇನೆ ಎಂಬ ಕಟ್ಟುನಿಟ್ಟಾದ ನಿಯಮಗಳನ್ನು ನಮಗೆ ನಾವೇ ಹಾಕಿಕೊಳ್ಳುವುದಲ್ಲದೆ ಕುಟುಂಬದ ಎಲ್ಲರೂ ಪಾಲಿಸಬೇಕು. ಆದ್ದರಿಂದ ಸ್ನೇಹಿತರೆ, 'ಬೆಟರ್ ಲೇಟ್ ದೆನ್ ನೆವರ್' ಎನ್ನುವಂತೆ ತಡವಾಗಿಯಾದರೂ ಪರವಾಗಿಲ್ಲ ಇಂದಿನಿಂದಲೇ ಸುಸ್ಥಿರ ಆರೋಗ್ಯವನ್ನು ಕಾಯ್ದುಕೊಳ್ಳುವಲ್ಲಿ ನಮಗೆ ನಾವೇ ಮೇಲ್ಪಂಕ್ತಿ ಹಾಕಿಕೊಳ್ಳೋಣ. ಸದೃಢ ಆರೋಗ್ಯವಂತ ಸಮೂಹವನ್ನು ಕಟ್ಟೋಣ.

**– ವೀಣಾ ಹೇಮಂತ್‌ಗೌಡ ಪಾಟೀಲ್.**
ಮುಂಡರಗಿ, ಗದಗ.

# ಸಂಬಂಧಗಳಲ್ಲಿಯೇ ವಿವಾಹ ಸಲ್ಲದು

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಂಬಂಧಗಳಲ್ಲಿ, ವಿಶೇಷವಾಗಿ ಸಹೋದರ ಸಂಬಂಧಿಗಳಲ್ಲಿ ವಿವಾಹವಾಗುವುದುರಿಂದ ಬುದ್ಧಿಮಾಂದ್ಯ ಹಾಗೂ ವಿಕಲಚೇತನ ಮಕ್ಕಳು ಹುಟ್ಟುವ ಸಾಧ್ಯತೆಗಳಿವೆಯೆಂದು ತಜ್ಞ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಇದು ಭೀಕರ ಸತ್ಯ ಕೂಡಾ ಆಗಿದೆ ಎಂದು ನಾಗರಿಕ ಹಿತರಕ್ಷಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ, ಹಿರಿಯ ರಂಗಕರ್ಮಿ ಪ್ರೊ. ಆರ್ ಎನ್ ಕುಲಕರ್ಣಿ ಹೇಳಿದರು.



ಅವರು ಜನಜಾಗೃತಿ ಚಿಂತನ ವೇದಿಕೆಯ ಸಾಪ್ತಾಹಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ, ದೂರದ ಅಥವಾ ಹತ್ತಿರದ ಸಂಬಂಧಗಳಲ್ಲಿಯ ವಿವಾಹದಿಂದ ಬುದ್ಧಿಮಾಂದ್ಯ ಮಕ್ಕಳು ಹುಟ್ಟುತ್ತವೆ ಎಂದು ವೈಜ್ಞಾನಿಕ ಅಧ್ಯಯನದಿಂದ ಖಚಿತವಾಗಿದೆ. ವಂಶವಾಹಿನಿಯ ವ್ಯತ್ಯಾಸದಿಂದ ಕ್ಯಾನ್ಸರ್ ರೋಗಗಳಿಗೆ ತುತ್ತಾಗುತ್ತಿವೆ ಎಂದು ಕರ್ನಾಟಕ ಡಿಎನ್‌ಎ ಸಂಶೋಧನಾ ಮುಖ್ಯಸ್ಥ ಡಾ.ಪ್ರಮೋದ ಗಾಯಿ ಎಚ್ಚರಿಕೆ ನೀಡಿದ್ದಾರೆ ಎಂದರು.

ಉಪಾಧ್ಯಕ್ಷ ಅಂದಾನೆಪ್ಪ ವಿಭೂತಿ ಮಾತನಾಡಿ, ಸಂಬಂಧಗಳಲ್ಲಿ ವಿವಾಹವಾದ ದಂಪತಿಗೆ ಜನಿಸಿದ ಶಿಶು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಉಳಿದ ಎಲ್ಲ ಅಂಗಗಳು ಸರಿಯಾಗಿದ್ದು, ಮಲಗಿದಲ್ಲಿಯೇ ಇಪ್ಪತ್ತೇಳು ವರ್ಷ ಜೀವಿಸಿತ್ತು. ಅದರ ತಾಯಿ ಇಷ್ಟು ವರ್ಷಗಳ ಕಾಲ ಪಟ್ಟ ಯಾತನೆ ಹೇಳತೀರದು. ಏನೇ ಆದರೂ ವೈದ್ಯರನ್ನು ಕಾಣುವುದು ಉತ್ತಮ ಎಂದು ಸಲಹೆ ನೀಡಿದರು.

ಡಾ. ಪ್ರಭು ಗಂಜಿಹಾಳ ಸ್ವಾಗತಿಸಿದರು. ಡಾ.ದತ್ತಪ್ರಸನ್ನ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಮಂಜು ಎ ವಂದಿಸಿದರು. ಮೌನೇಶ ಸಿ ಬಡಿಗೇರ, ವಿಶ್ವನಾಥಬೇಂದ್ರೆ, ರಾಚಯ್ಯ ಹೊಸಮಠ, ಪ್ರೊ. ಅಶೋಕ, ಗಾಯಿತ್ರಿ ಹೇರೇಮಠ, ಸುನಿತಾ, ಸುಚಿತ್ರಾ, ಎಸ್ ಬಿ ಕುಲಕರ್ಣಿ ಮುಂತಾದವರಿದ್ದರು.

# ಷಡ್ಯಂತ್ರದ ಹಿಂದಿರುವವರ ವಿರುದ್ಧ ಕಾನೂನು ಕ್ರಮ : ಸಚಿವ ಚಲುವರಾಯಸ್ವಾಮಿ ಎಚ್ಚರಿಕೆ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

'ಕುತಂತ್ರದ ಹಿಂದೆ ಯಾರಿದ್ದಾರೆ ಎಂಬುದು ಜನರಿಗೂ ಗೊತ್ತು' 'ಸತ್ಯಕ್ಕೆ ದೂರವಾದ ಯಾವ ಕುತಂತ್ರಗಳು ಫಲ ನೀಡುವುದಿಲ್ಲ' ಹೇಗಾದರೂ ಮಾಡಿ ನನ್ನನ್ನು ರಾಜಕೀಯವಾಗಿ ತುಳಿಯುವ ಉದ್ದೇಶದಿಂದ ವ್ಯವಸ್ಥಿತವಾಗಿ ಷಡ್ಯಂತ್ರ ಮತ್ತು ಪಿತೂರಿ ನಡೆಯುತ್ತಿದೆ. ನನ್ನನ್ನೇ ಗುರಿಯಾಗಿಸಿಕೊಂಡು ನಡೆಯುತ್ತಿರುವ ಈ ಕುತಂತ್ರದ ಹಿಂದೆ ಯಾರಿದ್ದಾರೆ ಎನ್ನುವ ಬಗ್ಗೆ ಹೆಸರು ಹೇಳುವ ಅವಶ್ಯಕತೆಯಿಲ್ಲ ಎಂದು ಕೃಷಿ ಸಚಿವ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ತಿಳಿಸಿದ್ದಾರೆ.



ತಮ್ಮ ಮೇಲಿನ ಆರೋಪದ ಬಗ್ಗೆ ಮಂಗಳವಾರ ಪತ್ರಿಕಾ ಪ್ರಕಟಣೆ ಹೊರಡಿಸಿ ಸ್ಪಷ್ಟನೆ ನೀಡಿರುವ ಅವರು, "ನನ್ನ ವಿರುದ್ಧ ವಿರೋಧಿಗಳು ನಡೆಸುತ್ತಿರುವ ಷಡ್ಯಂತ್ರಗಳು ಫಲ ನೀಡುವುದಿಲ್ಲ. ಜನರು ರಾಜಕೀಯವಾಗಿ ಪ್ರಬುದ್ಧರಿದ್ದು ನನ್ನ ವಿರುದ್ಧ ಷಡ್ಯಂತ್ರ ರೂಪಿಸುತ್ತಿರುವುದು ಯಾರೆಂದು ಅವರೇ ನಿರ್ಧರಿಸುತ್ತಾರೆ" ಎಂದಿದ್ದಾರೆ.

"ಸರ್ಕಾರ ಬದಲಾವಣೆ ಆದಾಗ ಸರ್ಕಾರಿ ನೌಕರರ ವರ್ಗಾವಣೆ ಒಂದು ಸಾಮಾನ್ಯ ಪ್ರಕ್ರಿಯೆ. ಇದು ಎಲ್ಲ ಹೊಸ ಸರ್ಕಾರಗಳು ಬಂದಾಗಲೂ ಸಹಜವಾಗಿ ನಡೆದಿವೆ. ಆದರೆ ನಾನು ಮೊದಲಿನಿಂದಲೂ ಈ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ನನ್ನ ಬಗ್ಗೆ ಬಹಳ ದ್ವೇಷ ಹೊಂದಿರುವ ಜನ ಹೇಗಾದರೂ ಸರಿ ನನ್ನ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ ತರುವ ಪ್ರಯತ್ನದ ಭಾಗವಾಗಿ ನಕಲಿ ಪತ್ರಗಳನ್ನು ಸೃಷ್ಟಿಸಿ ಸದರಿ ನಕಲಿ ಪತ್ರಗಳ ಆಧಾರದ ಮೇಲೆ ನೌಕರರನ್ನು ನೆಪವಾಗಿಸಿ ಷಡ್ಯಂತ್ರ ರೂಪಿಸುತ್ತಿದ್ದಾರೆ" ಎಂದು ಆರೋಪಿಸಿದ್ದಾರೆ.

# ಸರ್ಕಾರಿ ನೌಕರರು ಕಡ್ಡಾಯವಾಗಿ ಹೆಲ್ಮೆಟ್, ಸೀಟ್‌ಬೆಲ್ಟ್ ಧರಿಸಬೇಕು; ಜಿಲ್ಲಾಧಿಕಾರಿ ಆದೇಶ

**■ ವಿಜಯಸಾಕ್ಷಿ ಸುದ್ದಿ, ಬೀದರ್**

ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳು ದ್ವಿಚಕ್ರ/ನಾಲ್ಕು ಚಕ್ರ ವಾಹನಗಳಲ್ಲಿ ತೆರಳುವಾಗ ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ದ್ವಿಚಕ್ರ ವಾಹನ ಬಳಸುವವರು ಹೆಲ್ಮೆಟ್ ಧರಿಸಬೇಕು. ನಾಲ್ಕು ಚಕ್ರದ ವಾಹನದಲ್ಲಿ ತೆರಳುವವರು ಸೀಟ್‌ಬೆಲ್ಟ್ ಹಾಕಿಕೊಳ್ಳಬೇಕು ಎಂದು ಬೀದರ್ ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಆದೇಶಿಸಿದ್ದಾರೆ.



ಸಂಚಾರಿ ನಿಯಮಗಳ ಪಾಲನೆ ಬಗ್ಗೆ ಸರ್ಕಾರಿ ಅಧಿಕಾರಿಗಳಿಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ. "ದೇಶವು ರಸ್ತೆ ಅಪಘಾತದಲ್ಲಿ ಮೊದಲನೇ ಸ್ಥಾನದಲ್ಲಿದೆ. ದೇಶದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಬೀದರ್ ಜಿಲ್ಲೆಯಲ್ಲಿ 2022ರಲ್ಲಿ 332 ಜನರು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ. 2023ರ ಜುಲೈ ಅಂತ್ಯದವರೆಗೆ 197 ಮಂದಿ ಮೃತಪಟ್ಟಿದ್ದಾರೆ. ಅವರಲ್ಲಿ ಎರಡು ವರ್ಷಗಳಲ್ಲಿ 26 ಮಂದಿ ಸರ್ಕಾರಿ ನೌಕರರು ಮತ್ತು ಅವರ ಕುಟುಂಬಸ್ಥರು ಸಾವಿಗೀಡಾಗಿದ್ದಾರೆ" ಎಂದು ಅವರು ಹೇಳಿದ್ದಾರೆ.

"ಅಪಘಾತ ಸಂಭವಿಸಲು ಸಂಚಾರ ಮತ್ತು ರಸ್ತೆ ಸುರಕ್ಷತಾ ನಿಯಮಗಳು ಪಾಲನೆ ಮಾಡದೇ ಇರುವುದು ಮುಖ್ಯ ಕಾರಣವಾಗಿದೆ. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಹಾಗೂ ನಾಲ್ಕು ಚಕ್ರ ವಾಹನ ಸವಾರರು ಸೀಟ್ ಬೆಲ್ಟ್ ಧರಿಸದೇ ವಾಹನ ಚಲಾಯಿಸುವುದರಿಂದ ಅಪಘಾತ ಸಂಭವಿಸಿದಾಗ ಹೆಚ್ಚು ಪೆಟ್ಟುಗಳಾಗಿ ಸಾವುಗಳ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ, ಎಲ್ಲ ಸರ್ಕಾರಿ ನೌಕರರು ಹೆಲ್ಮೆಟ್ ಧರಿಸದೇ ಇರುವುದರಿಂದ ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಹೀಗಾಗಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಎಲ್ಲ ಸರ್ಕಾರಿ ನೌಕರರು ಕಡ್ಡಾಯವಾಗಿ ಹೆಲ್ಮೆಟ್, ಸೀಟ್‌ಬೆಲ್ಟ್ ಧರಿಸಬೇಕು" ಎಂದು ಆದೇಶಿಸಿದ್ದಾರೆ.

# ಡ್ಯೂಟಿ ನೀಡದ್ದಕ್ಕೆ ಬಿಎಂಟಿಸಿ ಬಸ್ ಡಿಪೋ ಮುಂದೆಯೇ ಚಾಲಕ ಆತ್ಮಹತ್ಯೆ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಹೆಂಡತಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ ನಾಗೇಶ್ ದೇವನಹಳ್ಳಿ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಬಸ್ ಡಿಪೋದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಚಾಲಕ ಕಂ ನಿರ್ವಾಹಕರೊಬ್ಬರು ತಡರಾತ್ರಿ ಡಿಪೋ ಮುಂದೆಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ಒಂದು ವಾರದಿಂದ ಸಿಬ್ಬಂದಿಗೆ ಡ್ಯೂಟಿ ನೀಡಿರಲಿಲ್ಲ ಎಂದು ತಿಳಿದುಬಂದಿದೆ.

ದೇವನಹಳ್ಳಿ ಪಟ್ಟಣದ ಹಳೆಯ ಬಸ್ ನಿಲ್ದಾಣದ ಡಿಪೋ ಬಳಿ ಈ ಘಟನೆ ನಡೆದಿದೆ. ನಾಗೇಶ್(45) ಮೃತ ವ್ಯಕ್ತಿ. ಇವರು ಮೂಲತಃ ಆವತಿ ಗ್ರಾಮದವರು. ಹೆಂಡತಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಮಧ್ಯರಾತ್ರಿ ನಾಗೇಶ್ ಡಿಪೋ ಮ್ಯಾನೇಜರ್ ಕೊಠಡಿಯ ಮುಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಗಿನ ಪಾಳಿಯ ಕೆಲಸಕ್ಕೆ ಬಂದ ಸಿಬ್ಬಂದಿ ಘಟನೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮೃತ ವ್ಯಕ್ತಿ ನಾಗೇಶ್ ಕಳೆದ ಕೆಲ ದಿನಗಳಿಂದ ಮಾನಸಿಕವಾಗಿ ನೊಂದಿದ್ದರು. ಹಾಗಾಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಸ್ಥಳಕ್ಕೆ ಆಗಮಿಸಿದ ದೇವನಹಳ್ಳಿ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಸದ್ಯ ಮೃತದೇಹವನ್ನು ಮರೋಣೋತ್ತರ ಪರೀಕ್ಷೆಗೆ ರ್ವಾಯಿಸಲಾಗಿದೆ.

ಈ ಬಗ್ಗೆ ಈ ದಿನ.ಕಾಮ್ ಜತೆಗೆ ಬಿಎಂಟಿಸಿ ಸಿಬ್ಬಂದಿಯೊಬ್ಬರು ಮಾತನಾಡಿ, "ನಾಗೇಶ್ ಮೂರು ದಿನ ಕುಟುಂಬದ ಸಮಸ್ಯೆಯಿಂದ ರಜೆ ತೆಗೆದುಕೊಂಡಿದ್ದರು. ಬಳಿಕ ಅವರಿಗೆ ಒಂದು ವಾರಗಳ ಕಾಲ ಡ್ಯೂಟಿ ನೀಡಿಲ್ಲ.

# ಎಸ್.ನಿಜಲಿಂಗಪ್ಪ ದೇಶ ಕಂಡ ಮುತ್ಸದ್ದಿ ರಾಜಕಾರಣಿ: ಸಿಎಂ ಸಿದ್ದರಾಮಯ್ಯ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

'ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಒತ್ತುಕೊಟ್ಟಿದ್ದರು' 'ನಿಜಲಿಂಗಪ್ಪ ಅತ್ಯಂತ ಪ್ರಾಮಾಣಿಕ ರಾಜಕಾರಣಿಯಾಗಿದ್ದರು' ಎಸ್.ನಿಜಲಿಂಗಪ್ಪ ಅವರು ದೇಶ ಕಂಡ ಮುತ್ಸದ್ದಿ ರಾಜ–ಕಾರಣಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ಮಾಜಿ ಮುಖ್ಯಮಂತ್ರಿ ದಿ.ಎಸ್. ನಿಜಲಿಂಗಪ್ಪ ನವರ ಪುಣ್ಯತಿಥಿ ಅಂಗವಾಗಿ ಮಂಗಳವಾರ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

"ರಾಜ್ಯದ ಮುಖ್ಯಮಂತ್ರಿಯಾಗಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ನೀರಾವರಿಗೆ ಹೆಚ್ಚು ಆದ್ಯತೆ ನೀಡಿ, ಏಕೀಕರಣದ ನಂತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಮಾಡುವ ಇಚ್ಛಾಶಕ್ತಿಯಿಂದ ಅನೇಕ ಯೋಜನೆಗಳನ್ನು ರೂಪಿಸಿದರು" ಎಂದು ಸ್ಮರಿಸಿದರು.

"ಅತ್ಯಂತ ಪ್ರಾಮಾಣಿಕ ರಾಜಕಾರಣಿಯಾಗಿದ್ದ ಅವರು ತಮ್ಮ ಜೀವನದುದ್ದಕ್ಕೂ ಅದನ್ನು ಕಾಪಾಡಿಕೊಂಡು ಬಂದವರು. ಧೀಮಂತ ನಾಯಕರಾಗಿದ್ದ ಅವರ ಪುಣ್ಯತಿಥಿ ಆಚರಿಸಿ ಗೌರವ ಸಲ್ಲಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಅವರ ಬದುಕು ನಮಗೆ ಮಾರ್ಗದರ್ಶನ ನೀಡಲಿ. ನಿಜಲಿಂಗಪ್ಪನವರು ಈ ನಾಡಿಗೆ ಹಾಗೂ ದೇಶಕ್ಕೆ ಮಾಡಿದ ಸೇವೆಯನ್ನು ನಾವೆಲ್ಲರೂ ಸ್ಮರಿಸಬೇಕು" ಎಂದರು.

# ಜರ್ಮನಿಯಲ್ಲಿ 2ನೇ ವಿಶ್ವ ಯುದ್ಧದ ಬಾಂಬ್ ಪತ್ತೆ: 13,000 ಜನರಿಗೆ ಮನೆ ತೊರೆಯಲು ಸೂಚನೆ

**■ ವಿಜಯಸಾಕ್ಷಿ ಸುದ್ದಿ, ಜರ್ಮನಿ**

ಎರಡನೇ ವಿಶ್ವ ಯುದ್ಧದ ವೇಳೆಯಲ್ಲಿನ ಸಜೀವ ಬಾಂಬ್ ಪತ್ತೆಯಾದ ಹಿನ್ನೆಲೆಯಲ್ಲಿ ಜರ್ಮನಿಯ ಡಸೆಲ್ಡಾರ್ಫ್‌ನಲ್ಲಿರುವ ಅಧಿಕಾರಿಗಳು ಸರಿಸುಮಾರು 13,000 ಜನರನ್ನು ಮನೆಗಳನ್ನು ತೊರೆಯುವಂತೆ ಸೂಚಿಸಿದ್ದಾರೆ.

ಸಜೀವ ಬಾಂಬ್‌ನ್ನು ವಿಲೇವಾರಿ ಮಾಡಲು ಪೊಲೀಸ್ ಮತ್ತು ಬಾಂಬ್ ಸ್ಕ್ವಾಡ್ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ ಎಂದು ಜರ್ಮನ್ ಸುದ್ದಿವಾಹಿನಿ ಡಿಡಬ್ಲ್ಯೂ ಹೇಳಿದೆ.

ಒಂದು ಟನ್ ತೂಕದ ಬಾಂಬ್ ನ್ನು ಆಗಸ್ಟ್ 7–8 ರಂದು ಪತ್ತೆಹಚ್ಚಲಾಗಿದೆ. ನಗರದ ಮೃಗಾಲಯದ ಬಳಿ ಕೆಲಸದ ಸಮಯದಲ್ಲಿ ಇದು ಪತ್ತೆಯಾಗಿದೆ ಎಂದು ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಔಟ್‌ಲೆಟ್ ವರದಿ ಮಾಡಿದೆ.

ಎರಡನೇ ವಿಶ್ವಯುದ್ಧದ ವೇಳೆ ಉಳಿದಿರುವ ಸಾವಿರಾರು ಬಾಂಬ್‌ಗಳನ್ನು ಇನ್ನೂ ಜರ್ಮನಿಯಲ್ಲಿ ಹೂಳಲಾಗಿದೆ ಎಂದು ವರದಿಗಳು ಹೇಳುತ್ತಿವೆ.

ಡಸೆಲ್ಡಾರ್ಫ್‌ನಲ್ಲಿ, ಅಧಿಕಾರಿಗಳು ಬಾಂಬ್ ಪತ್ತೆಯಾದ ಸ್ಥಳದ 500–ಮೀಟರ್ ವ್ಯಾಪ್ತಿಯಲ್ಲಿರುವ ಎಲ್ಲಾ ನಿವಾಸಿಗಳಿಗೆ ಪ್ರದೇಶವನ್ನು ತೊರೆಯಲು ಆದೇಶಿಸಿದ್ದಾರೆ. ಬಾಂಬ್ ವಿಲೇವಾರಿ ಕಾರ್ಯಾಚರಣೆಯ ಸಮಯದಲ್ಲಿ ಆ ಭಾಗದ ರಸ್ತೆಗಳನ್ನು ಕೂಡ ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ ಎಂದು ವರದಿ ತಿಳಿಸಿದೆ. ಸ್ಥಳೀಯ ನಿವಾಸಿಗಳು ತಮ್ಮ ಸಾಕುಪ್ರಾಣಿಗಳ ಜೊತೆ ಮನೆಯನ್ನು ತೊರೆದು ಬೇರೆ ಕಡೆ ಸ್ಥಳಾಂತರವಾಗಿದ್ದಾರೆ. 2017ರಲ್ಲಿ 1.4ಟನ್ ಬಾಂಬ್ ಪತ್ತೆಯಾದ ವೇಳೆ ಸರಿಸುಮಾರು 65,000 ಜನರನ್ನು ಸ್ಥಳಾಂತರಗೊಳ್ಳುವಂತೆ ಸೂಚಿಸಲಾಗಿತ್ತು.

2021ರಲ್ಲಿ ಕೂಡ ಎರಡನೇ ವಿಶ್ವ ಯುದ್ಧದ ವೇಳೆಯಲ್ಲಿನ ಸಜೀವ ಬಾಂಬ್ ವೊಂದು ಕಾಮಗಾರಿ ಕಟ್ಟಡದ ಬಳಿ ಸ್ಫೋಟಗೊಂಡು ನಾಲ್ವರು ಗಾಯಗೊಂಡಿದ್ದರು ಮತ್ತು ರೈಲ್ವೇ ಹಳಿಗಳು ಹಾನಿಯಾಗಿದ್ದವು.

### ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಸುಜ್ಞಾನದೆಡೆಗೆ ಕರೆದೊಯ್ಯುವ ಶಕ್ತಿಯೇ ಗುರು

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಜೀವನದ ಉತ್ಕರ್ಷತೆಗೆ ಧರ್ಮದ ಆದರ್ಶ ಚಿಂತನಗಳ ಅವಶ್ಯಕತೆಯಿದೆ. ಅರಿವು ಜೀವನದ ಶ್ರೇಯಸ್ಸಿಗೆ ಮೂಲ. ಸುಜ್ಞಾನದೆಡೆಗೆ ಮತ್ತು ಸತ್ಪಥದ ಕಡೆಗೆ ಕರೆದೊಯ್ಯುವ ಶಕ್ತಿಯೇ ಶ್ರೀ ಗುರು ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



> ಅಧರ್ಮದಿಂದ ಮನುಷ್ಯನು ತಾತ್ಕಾಲಿಕವಾಗಿ ಮೇಲೇರಿದರೂ, ಅಂತಿಮವಾಗಿ ಬುಡ ಸಹಿತ ನಾಶವಾಗುತ್ತಾನೆ. ಬಡವನಾದರೂ ತೃಪ್ತಿ ಇರುವವನೇ ನಿಜವಾದ ಶ್ರೀಮಂತ. ಐಶ್ವರ್ಯದ ಅಡಿಪಾಯ ದುಡಿಮೆಯಲ್ಲಿದೆ ಎಂಬುದನ್ನು ಮರೆಯಬಾರದು. ಕೆಟ್ಟವರು ತುಂಬಾ ಬೆಳೆಯಬಹುದು. ಆದರೆ ಉಳಿಯಲು ಸಾಧ್ಯವಿಲ್ಲ. ಒಳ್ಳೆಯವರನ್ನು ತುಂಬಾ ತುಳಿಯಬಹುದು. ಆದರೆ ನಾಶಗೊಳಿಸಲು ಸಾಧ್ಯವಿಲ್ಲ.
> **– ಡಾ.ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಅವರು ಭಾನುವಾರ ಜೆ ಪಿ ನಗರದ ಶ್ರೀ ಸೋಮೇಶ್ವರ ಸಭಾ ಭವನದಲ್ಲಿ ವೀರಶೈವ ಲಿಂಗಾಯತ ಸಂಗಮ ಆಶ್ರಯದಲ್ಲಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಅಜ್ಞಾನವೆಂಬ ಕತ್ತಲೆ ಕಳೆದು ಜ್ಞಾನದ ಜ್ಯೋತಿ ಬೆಳಗಿಸಬಲ್ಲಾತನೇ ಶ್ರೀ ಗುರು. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ವೀರಶೈವ ಧರ್ಮದ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ಹಾಗೂ ವಿಚಾರಧಾರೆಗಳು ಸರ್ವರಿಗೂ ಸರ್ವ ಕಾಲಕ್ಕೂ ಅನ್ವಯಿಸುತ್ತವೆ. ಮನುಷ್ಯ ಜೀವನದಲ್ಲಿ ಗುರು ಮತ್ತು ಗುರಿ ಹೊಂದಿ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆಂದರು.

ಸಮಾರಂಭ ಉದ್ಘಾಟಿಸಿದ ಶಾಸಕ ಎಂ ಕೃಷ್ಣಪ್ಪ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಇರುವ ವೈಶಾಲ್ಯತೆ ಬೇರೆಲ್ಲಿಯೂ ಕಾಣಲಾಗದು. ಈ ನಾಡಿನ ಋಷಿ–ಮುನಿಗಳು ಮತ್ತು ಆಚಾರ್ಯರ ಬೋಧನೆಯಿಂದಾಗಿ ನಾವೆಲ್ಲರೂ ಸುಖಿಗಳಾಗಿ ಬಾಳುತ್ತಿದ್ದೇವೆ. ಉತ್ತಮ ಸಮಾಜ ನಿರ್ಮಾಣಕ್ಕೆ ಇಂಥ ಸಮಾರಂಭಗಳ ಅವಶ್ಯಕತೆಯಿದೆ ಎಂದರು. ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ದೂರ ನೆಟ್ಟ ಮರಗಳು ಬೆಳೆಯುತ್ತಿದ್ದಂತೆ ಹತ್ತಿರವಾಗುತ್ತವೆ. ಆದರೆ ಮನುಷ್ಯರು ಬೆಳೆಯುತ್ತಿದ್ದಂತೆ ಅವರ ಮನಸ್ಸುಗಳು ದೂರವಾಗುತ್ತಾ ಹೋಗುತ್ತವೆ. ಇದರಿಂದಾಗಿ ಸಮಾಜದಲ್ಲಿ ಸದ್ಭಾವ ಸಾಮರಸ್ಯ ಕಾಣಲು ಸಾಧ್ಯವಿಲ್ಲದಂತಾಗಿದೆ ಎಂದರು. ರಾಜಾಪುರ ಮಠದ ಡಾ.ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು ನುಡಿ ನಮನ ಸಲ್ಲಿಸಿದರು. ವೀರಶೈವ ಲಿಂಗಾಯತ ಸಂಗಮ ಅಧ್ಯಕ್ಷ ಚಂದ್ರಶೇಖರಗೌಡರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾಜಿ ಮಹಾಪೌರ ಗಂಗಾಂಬಿಕೆ ಮಲ್ಲಿಕಾರ್ಜುನ, ಎಂ ಜಯರಾಮ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ನೀಲಾಂಬಿಕಾ ಮಹಿಳಾ ಸಮಾಜದ ಸದಸ್ಯರು ಪ್ರಾರ್ಥನೆ ಸಲ್ಲಿಸಿದರು. ಜ್ಯೋತಿ ಶಶಿಧರ ತಂಡದವರಿಂದ ಭಕ್ತಿ ಗಾಯನ ಜರುಗಿತು. ಪ್ರೊ. ಎ ಆರ್ ಶಿವಕುಮಾರ ನಿರೂಪಿಸಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ
'ವಿಜಯಸಾಕ್ಷಿ'
ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಬಡವರ ಕಲ್ಯಾಣಕ್ಕೆ ನಮ್ಮ ಸರಕಾರ ಸದಾ ಬದ್ಧ

▶▶ ಮೊದಲನೇ ಪುಟದಿಂದ



ಗದಗ ಜಿಲ್ಲೆಯಲ್ಲಿ ಈವರೆಗೆ 88 ಲಕ್ಷ ಮಹಿಳೆಯರು ಶಕ್ತಿ ಯೋಜನೆಯ ಲಾಭ ಪಡೆದಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಅಕ್ಕಿ, ಜೋಳದ ಜೊತೆಗೆ ಪ್ರತಿ ವ್ಯಕ್ತಿಗೆ 170 ರೂ.ನಂತೆ ಜಿಲ್ಲೆಯಲ್ಲಿ 10 ಕೋಟಿ ರೂ. ಹಣ ವಿತರಿಸಲಾಗಿದೆ. ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯಲ್ಲಿ ಶೇ.90ರಷ್ಟು ನೋಂದಣಿಯಾಗಿದ್ದು, ಆಗಸ್ಟ 17ರಂದು ಮನೆ ಯಜಮಾನಿ ಖಾತೆಗೆ ಹಣ ಜಮೆಯಾಗಲಿದೆ. ಯುವನಿಧಿ ಕಾರ್ಯಕ್ರಮ ಡಿಸೆಂಬರ್ ತಿಂಗಳಲ್ಲಿ ಆರಂಭವಾಗಲಿದ್ದು, ಜಿಲ್ಲೆಯ 6900 ಅರ್ಹ ಫಲಾನುಭವಿಗಳ ನೋಂದಣಿ ಕಾರ್ಯ ಪೂರ್ಣಗೊಂಡಿದೆ ಎಂದು ಸಚಿವ ಎಚ್ ಕೆ ಪಾಟೀಲ ತಿಳಿಸಿದರು.

ಹಣದಿಂದ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಹಾಗೂ ಆರ್ಥಿಕ ಸ್ವಾವಲಂಬನೆಗಾಗಿ ಬಳಸಿಕೊಳ್ಳುವಂತೆ ಸಚಿವ ಎಚ್ ಕೆ ಪಾಟೀಲ ಸಲಹೆ ನೀಡಿದರು.

ಹೆಸ್ಕಾಂ ಹುಬ್ಬಳ್ಳಿ ವಿಭಾಗದ ಅಧೀಕ್ಷಕ ಇಂಜಿನಿಯರ್ ಎಸ್ ಎಸ್ ಜಂಗಿನ ಮಾತನಾಡಿ, ಭಾಗ್ಯಜ್ಯೋತಿ ಹಾಗೂ ಕುಟಿರ ಜ್ಯೋತಿ ಯೋಜನೆಗಳನ್ನು ಗೃಹಜ್ಯೋತಿಯೊಳಗೆ ವಿಲೀನಗೊಳಿಸಿ, ಮಾಸಿಕ 53 ಯುನಿಟ್ ವಿದ್ಯುತ್ ಹಾಗೂ ಅಮೃತ ಜ್ಯೋತಿ ಯೋಜನೆಯಡಿ 75 ಯುನಿಟ್ ಉಚಿತ ವಿದ್ಯುತ್ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಜಿ ಎಸ್ ಗಡ್ಡದ್ದೇವರಮಠ, ಡಿ ಆರ್ ಪಾಟೀಲ, ನಗರಸಭೆ ವಿರೋಧ ಪಕ್ಷದ ನಾಯಕರಾದ ಎಲ್ ಡಿ ಚಂದಾವರಿ, ಕೃಷ್ಣ ಪರಾಪುರೆ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರುಗಳಾದ ಗುರಣ್ಣ ಬಳಗಾನೂರ, ಪ್ರಭು ಬುರಬುರೆ, ಜಿ ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಪ್ರಕಾಶ ಬೊಮ್ಮನಹಳ್ಳಿ, ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ, ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ರೋಷನ್, ಹೆಸ್ಕಾಂ ಹುಬ್ಬಳ್ಳಿ ವಲಯ ಮುಖ್ಯ ಇಂಜಿನೀಯರ್(ವಿ) ರಮೇಶ ಎಲ್ ಬೆಂಡಿಗೇರಿ, ಗದಗ ಹೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ ರಾಜೇಶ ಕಲ್ಯಾಣಶೆಟ್ಟಿ ಮತ್ತು ರವಿ ಕಿರಣ ಸೇರಿದಂತೆ ಫಲಾನುಭವಿಗಳು ಹಾಜರಿದ್ದರು. ಬಾಬಹುಬಲಿ ಜೈನರ ಕಾರ್ಯಕ್ರಮ ನಿರ್ವಹಿಸಿದರು.

# ತರಬೇತಿಯ ಸಂದೇಶಗಳನ್ನು ವೃತ್ತಿಯಲ್ಲಿ ಪಾಲಿಸಿ

▶▶ ಮೊದಲನೇ ಪುಟದಿಂದ

**'ಕೂಸಿನ ಮನೆ'ಯಲ್ಲಿ ಏನೇನಿರಲಿದೆ?**

ಇದೇ ಆಗಸ್ಟ್ 15ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಏಕಕಾಲಕ್ಕೆ ಪ್ರತಿ ಗ್ರಾಮ ಪಂಚಾಯಿತಿಗೆ ಒಂದದಂತೆ ಶಿಶುಪಾಲನಾ ಕೇಂದ್ರ ತೆರೆಯಲಿದ್ದು, ಅಲ್ಲಿ ದಾಖಲಾಗುವ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ಆರೈಕೆದಾರರ (ಕೇರ್ ಟೇಕರ್) ಅಗತ್ಯದ ಹಿನ್ನೆಲೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಶಿಶುಪಾಲನಾ ಕೇಂದ್ರಗಳಲ್ಲಿ ಸಮರ್ಪಕವಾದ ಕಟ್ಟಡ, ನೀರು, ಗಾಳಿ, ಬೆಳಕು, ಶೌಚಾಲಯ ವ್ಯವಸ್ಥೆ ಇರಲಿದೆ. ಇದರೊಂದಿಗೆ ಮಕ್ಕಳಿಗೆ ಆಟದ ಸಾಮಗ್ರಿಗಳು, ಕಲಿಕಾ ಸಾಮಗ್ರಿಗಳನ್ನು ಈ ಕೇಂದ್ರ ಒಳಗೊಂಡಿರಲಿದೆ.

ತಮ್ಮನ್ನು ಆಯ್ಕೆ ಮಾಡಲಾಗಿದ್ದು, ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಂಡರಗಿ ತಾ ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಗದಗ ತಾ ಪಂ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪರಿಣಿತ ತರಬೇತುದಾರರು ಕೇರ್ ಟೇಕರ್‌ಗಳಿಗೆ ತರಬೇತಿ ನೀಡಿದರು. ಗದಗ ಜಿ ಪಂ ಹಾಗೂ ತಾ ಪಂ ಐಇಸಿ ಸಂಯೋಜಕರು, ಗದಗ ಹಾಗೂ ಮುಂಡರಗಿಯ ಕೇರ್ ಟೇಕರ್‌ಗಳು ಹಾಜರಿದ್ದರು.

# ಜಿಲ್ಲೆಯ ಹಿರಿಮೆಯನ್ನು ದೇಶ-ವಿದೇಶಕ್ಕೆ ಪರಿಚಯಿಸಲು ಕ್ರಮ

▶▶ ಮೊದಲನೇ ಪುಟದಿಂದ

ಪ್ರವಾಸೋದ್ಯಮ ಅಭಿವೃದ್ಧಿಪಡಿಸಿ, ದೇಶ-ವಿದೇಶಕ್ಕೆ ಪರಿಚಯಿಸಲು ಕ್ರಮ ವಹಿಸಲಾಗುವುದು ಎಂದರು.

ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಮನೋಜ ಕುಮಾರ ಮಾತನಾಡಿ, ಗದಗ ಜಿಲ್ಲೆಯ ಎಲ್ಲ ಪಾರಂಪರಿಕ ಹಾಗೂ ಪ್ರವಾಸೋದ್ಯಮ ತಾಣಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಾಗಿದೆ. ಸಮಿತಿಯಿಂದ ಸುದೀರ್ಘವಾಗಿ ಮೂರು ಸಭೆಗಳನ್ನು ನಡೆಸಿ ಚರ್ಚಿಸಲಾಗಿದೆ. ಜಿಲ್ಲೆಯ 56 ವಿಶಿಷ್ಟ ಸ್ಮಾರಕಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಲಾಗಿದೆ. ಅಲ್ಲದೇ ಜಿಲ್ಲೆಯ ಸಂಗೀತ ಕ್ಷೇತ್ರ, ಪಾರಂಪರಿಕ ಸಂಪತ್ತು, ಸಹಕಾರ, ಪವನಶಕ್ತಿ, ಸೌರಶಕ್ತಿ ಕುರಿತು ಅಧ್ಯಯನ ಮಾಡಲಾಗಿದೆ. ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಕುರಿತಂತೆ ಅಲ್ಪಾವಧಿಯಲ್ಲಿ ಉತ್ತಮ ಯೋಜನೆ ತಯಾರಿಸಿ ಸರ್ಕಾರಕ್ಕೆ ನೀಡುವಲ್ಲಿ ಸಚಿವರಾದ ಎಚ್ ಕೆ ಪಾಟೀಲ, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲೆಯ ತಜ್ಞರು, ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಿ ಜಗದೀಶ, ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಲಕ್ಕುಂಡಿ ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮಿತಿಯ ಸದಸ್ಯರಾದ ಜೆ ಕೆ ಜಮಾದಾರ, ಆರ್ ಆರ್ ಓದುಗೌಡರ, ಅಬ್ದುಲ ಕಟ್ಟಿಮನಿ ಮುಂತಾದವರು ಹಾಜರಿದ್ದರು.

# ಎದೆಹಾಲು ಪ್ರತೀ ಮಗುವಿನ ಹಕ್ಕು

▶▶ ಮೊದಲನೇ ಪುಟದಿಂದ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಕರಿಗೌಡ್ರ ವಹಿಸಿದ್ದರು. ಸಂಕನೂರ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ರಶ್ಮಿ ವಿನ್ಸೆಂಟ್ ಪಾಟೀಲ ಸ್ವಾಗತಿಸಿದರು. ಸಹ ಪ್ರಾಚಾರ್ಯ ವಿನ್ಸೆಂಟ್ ಪಾಟೀಲ, ಉಪನ್ಯಾಸಕರಾದ ರಾಧಾ ಗುಜ್ಜರ, ಕವಿತಾ ಪವಾರ ಸೇರಿದಂತೆ ಶುಶ್ರೂಷಕಾ ಅಧೀಕ್ಷಕಿ ಹೇಮಲತಾ, ಶುಶ್ರೂಷಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗರ್ಭಿಣಿ ತಾಯಂದಿರು, ಸಂಕನೂರ ನರ್ಸಿಂಗ್ ಕಾಲೇಜಿನ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕರ ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡುವ ಮೂಲಕ ಜನಸ್ನೇಹಿ ಆಡಳಿತ ನೀಡಿ- ಸಚಿವ ಕೃಷ್ಣ ಬೈರೇಗೌಡ**

# ಆಡಳಿತ ವರ್ಗ ಚುರುಕಾಗಿ ಕಾರ್ಯನಿರ್ವಹಿಸಿ

■ ವಿಜಯಸಾಕ್ಷಿ ಸುದ್ದಿ, ಮೈಸೂರು



ತಹಸೀಲ್ದಾರ್‌ಗಳು, ಉಪ ವಿಭಾಗಾಧಿಕಾರಿಗಳು, ಹಾಗೂ ಜಿಲ್ಲಾಧಿಕಾರಿಗಳು ತಮ್ಮ ಹಂತದಲ್ಲಿ ಇರುವ ಕೋರ್ಟ್ ಪ್ರಕರಣಗಳನ್ನು ಬಾಕಿ ಉಳಿಸಿಕೊಳ್ಳಬಾರದು. ವಾರದಲ್ಲಿ 2 ದಿನ ಕೋರ್ಟ್ ತೆಗೆದುಕೊಂಡು ಆದ್ಯತೆಯ ಮೇಲೆ ಪ್ರಕರಣಗಳನ್ನು ವಿಲೇವಾರಿ ಮಾಡಬೇಕು.

–ಕೃಷ್ಣ ಬೈರೇಗೌಡ

ಸಾರ್ವಜನಿಕರು ಹಲವಾರು ಕೆಲಸಗಳು, ಸೌಲಭ್ಯಗಳಿಗೆ ಕಂದಾಯ ಇಲಾಖೆಗಳಿಗೆ ಅರ್ಜಿ ಸಲ್ಲಿಸುತ್ತಾರೆ. ಇವರ ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಬೇಕು. ಅನಗತ್ಯವಾಗಿ ವಿಳಂಬ ಮಾಡಬಾರದು. ಆಡಳಿತ ವರ್ಗ ಚುರುಕಾಗಿ ಕಾರ್ಯನಿರ್ವಹಿಸಿ, ಜನಸ್ನೇಹಿ ಆಡಳಿತ ನೀಡಿ ಸರ್ಕಾರಕ್ಕೆ ಉತ್ತಮ ಹೆಸರು ತಂದು ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸಿ ಎಂದು ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ತಿಳಿಸಿದರು

ಮಂಗಳವಾರ ಪ್ರಾದೇಶಿಕ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೈಸೂರು ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಂದಾಯ ಇಲಾಖೆಯು ನೇರವಾಗಿ ಜನರೊಂದಿಗೆ ಸಂಪರ್ಕ ಹೊಂದಿರುವ ಇಲಾಖೆ. ಜನಪರ ಆಡಳಿತ ನೀಡುವುದು ಮಾತ್ರ ಇಲಾಖೆಯಾದ ಕಂದಾಯ ಇಲಾಖೆಯಿಂದ ಆರಂಭವಾಗಬೇಕು. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ.30% ರಷ್ಟು ಮಳೆ ಕೊರತೆ ಆಗಿದೆ. ಮುಂದೆಯೂ ಮಳೆ ಕಡಿಮೆ ಆಗುವ ಸಾಧ್ಯತೆ ಇರುವುದರಿಂದ ರೈತರು ಹೆಚ್ಚಿನ ನೀರನ್ನು ಬಳಸುವ ಬೆಳೆಗಳನ್ನು ಬೆಳೆಯಬಾರದು ಎಂದರು.

ಮಳೆಯಿಂದ ಮಾನವ ಜೀವ ಹಾನಿ ಆಗಿದ್ದು, ಮುಂದೆ ಈ ರೀತಿ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅಪಾಯದ ಸ್ಥಳದಲ್ಲಿ ಇರುವವರನ್ನು ಬೇರೆಡೆಗೆ ಶಿಫ್ಟ್ ಮಾಡಿ ಪ್ರಾಣ ಹಾನಿ ಆಗದಂತೆ ತಡೆಗಟ್ಟಬೇಕು. ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಕಾಲು ಸಂಕಗಳು ಹಾಗೂ ವೆಂಟೆಡ್ ಡ್ಯಾಮ್‌ಗಳನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು. ವಿಪತ್ತು ನಿರ್ವಹಣೆ ಪರಿಹಾರದಲ್ಲಿಯೂ ಅಕ್ರಮ ಆಗುತ್ತಿದ್ದು, ಅನರ್ಹರು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬರ, ಪ್ರವಾಹ ಹಾಗೂ ಕೋವಿಡ್‌ಗೆ ಸಂಬಂಧಿಸಿದಂತೆ ಕ್ಯಾಲಾಮಿಟಿ ಫಂಡ್‌ನಲ್ಲಿ ಕೈಗೊಂಡಿರುವ ಕಾಮಗಾರಿಗಳು 4 ವರ್ಷಗಳಿಂದ ಬಾಕಿ ಉಳಿದಿದ್ದು, ಇದರಲ್ಲಿಯೂ ಬಾಕಿ ಇರುವುದಕ್ಕೆ ಅಸಮದಾನ ವ್ಯಕ್ತಪಡಿಸಿದ ಅವರು, ಅದೇ ವರ್ಷಗಳಲ್ಲಿ ಕಾಮಗಾರಿಗಳು ಮುಗಿಯಬೇಕು ಎಂದು ತಾಕೀತು ಮಾಡಿದರು. ಭೂಮಿ ತಂತ್ರಾಂಶದಲ್ಲಿ ಬರುವ ಕಡತಗಳನ್ನು 15 ದಿನಗಳಲ್ಲಿ ವಿಲೇವಾರಿ ಮಾಡಬೇಕು. ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿಯೂ ಸಕಾಲದಲ್ಲಿ ಅರ್ಜಿಗಳು ವಿಲೇವಾರಿ ಆಗುತ್ತಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು. ವಿಳಂಬಕ್ಕೆ ಕಾರಣವಾದ ತಹಸೀಲ್ದಾರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ ಮಾತನಾಡಿ, ಪದೇ ಪದೇ ಪ್ರವಾಹ ಬಂದು ಅಪಾಯ ಉಂಟಾಗುವ ಊರುಗಳನ್ನು ಶಾಶ್ವತವಾಗಿ ಶಿಫ್ಟ್ ಮಾಡಿ ಶಾಶ್ವತ ಪುನರ್ವಸತಿ ಕಲ್ಪಿಸುವ ಕ್ರಮವನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳಬೇಕು. ತಹಸೀಲ್ದಾರ, ಉಪವಿಭಾಗಾಧಿಕಾರಿಗಳ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರ ಕೆಲಸಗಳು ಸಕಾಲದಲ್ಲಿ ಆಗಬೇಕು ಎಂದರು.

ಕಂದಾಯ ಮತ್ತು ವಿಪತ್ತು ನಿರ್ವಹಣೆಯ ಪ್ರಧಾನ ಕಾರ್ಯದರ್ಶಿಗಳಾದ ರಶ್ಮಿ.ವಿ.ಮಹೇಶ್ ಮಾತನಾಡಿ, ಇಲ್ಲಿಯವರೆಗೆ ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಮಳೆ ಕಡಿಮೆ ಆಗುವ ಮಾಹಿತಿ ಇದೆ. ಮಳೆ ಅನಾಹುತಗಳಿಗೆ ಎಸ್.ಡಿ.ಆರ್.ಎಫ್ ಅನುದಾನದಲ್ಲಿ ಪರಿಹಾರಗಳನ್ನು ವಿತರಣೆ ಮಾಡಬೇಕು. ಪಿಡಿ ಅಕೌಂಟ್‌ನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಮೈಸೂರು ಜಿಲ್ಲಾಧಿಕಾರಿಗಳಾದ ಡಾ. ಕೆ ವಿ ರಾಜೇಂದ್ರ ಅವರು ಮಾತನಾಡಿ ಕೆ.ಆರ್.ಎಸ್, ಕಬಿನಿ ಹಾಗೂ ಚಿಕ್ಕ ಡ್ಯಾಮ್‌ಗಳಾದ ನುಗು ಮತ್ತು ತಾರಕ ಜಲಾಶಯಗಳಿಂದ ಕುಡಿಯುವ ನೀರನ್ನು ಬಳಕೆ ಮಾಡಲಾಗುತ್ತಿದೆ. ರೈತರ ಬೆಳೆಗಳಿಗೆ ನೀರನ್ನು ಈಗಿನ ಪರಿಸ್ಥಿತಿಯಲ್ಲಿ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ರೈತರು ಡ್ರೈ ಬೆಳೆಗಳಾದ ರಾಗಿ ಜೋಳ ರೀತಿಯ ಬೆಳೆಗಳನ್ನು ಬೆಳೆಯುವಂತೆ ಅರಿವು ಮೂಡಿಸಲಾಗತ್ತಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಪ್ರಾದೇಶಿಕ ಆಯುಕ್ತರಾದ ಪ್ರಕಾಶ್, ಕಂದಾಯ ಇಲಾಖೆಯ ಆಯುಕ್ತರಾದ ಸುನೀಲ್ ಕುಮಾರ್, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯ ಆಯುಕ್ತರಾದ ಜೆ. ಮಂಜುನಾಥ್, ಹಾಸನ ಜಿಲ್ಲಾಧಿಕಾರಿಗಳಾದ ಸಿ ಸತ್ಯಭಾಮ, ಕೊಡಗು ಜಿಲ್ಲಾಧಿಕಾರಿಗಳಾದ ವೆಂಕಟ್ ರಾಜ, ಮಂಡ್ಯ ಜಿಲ್ಲಾಧಿಕಾರಿಗಳಾದ ಡಾ. ಕುಮಾರ್, ಉಡುಪಿ ಜಿಲ್ಲಾಧಿಕಾರಿಗಳಾದ ವಿದ್ಯಾಕುಮಾರಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಮೀನಾ ನಾಗರಾಜ್, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಾದ ಮುಲ್ಲೈ ಮುಹಿಲನ್, ಚಾಮರಾಜನಗರ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಸೇರಿದಂತೆ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ದಿನಾಚರಣೆ ಕುರಿತು ಪೂರ್ವಭಾವಿ ಸಭೆ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪ್ರತಿಯೊಬ್ಬರ ಸಹಕಾರದಿಂದ ನಾವೆಲ್ಲರೂ ಸೇರಿ ಜಗದ್ಗುರು ಅನ್ನದಾನೀಶ್ವರ ತಾಲೂಕು ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸೋಣ ಎಂದು ತಹಸೀಲ್ದಾರ್ ಧನಂಜಯ್ ಮಾಲಗತ್ತಿ ಹೇಳಿದರು.

ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದ ಸಭಾಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ ಕುರಿತು ಸೋಮವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆ.15ರಂದು ಪ್ರತಿ ಶಾಲಾ, ಕಾಲೇಜು ಹಾಗೂ ತಾಲೂಕು ಕಚೇರಿಗಳಲ್ಲಿ ಬೆಳಗ್ಗೆ 7.30ಕ್ಕೆ ಧ್ವಜಾರೋಹಣ ನೆರವೇರಿಸಬೇಕು. ನಂತರ 9 ಗಂಟೆಗೆ ತಾಲೂಕು ಕ್ರೀಡಾಂಗಣದಲ್ಲಿ ನಡೆಯುವ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು ಎಂದು ಸೂಚಿಸಿದರು. ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಸನ್ಮಾನಿಸಲಾಗುವುದು ಎಂದರು.

ತಾಲೂಕು ನೌಕರರ ಸಂಘದ ಅಧ್ಯಕ್ಷ ನಾಗರಾಜ ಹಳ್ಳಿಕೇರಿ, ಬಸವರಾಜ ನಲವಗುಂದ, ಸುರೇಶ ಹಲವಾಗಲಿ, ಮಲ್ಲಿಕಾರ್ಜುನ ದೊಡ್ಡಮನಿ, ಅಡಿವೆಪ್ಪ ಚಲವಾದಿ, ಮಂಜುನಾಥ ಮುಧೋಳ ಮೊದಲಾದವರು ಶಿಸ್ತುಬದ್ಧವಾಗಿ ಧ್ವಜಾರೋಹಣ ನೆರವೇರಿಸುವ ಕುರಿತು, ಕೋಟೆಗುಡ್ಡದ ಮೇಲೆ ದೀಪಾಲಂಕಾರ ಮಾಡುವ ಬಗ್ಗೆ ಮಾತನಾಡಿದರು. ಎಸ್ ಎಸ್ ಬಿಚ್ಚಾಲಿ, ಎಂ ಜಿ ಗಚ್ಚಣ್ಣವರ, ನಾಗರಾಜ ಹೊಂಬಳಗಟ್ಟಿ, ಶಿವಾನಂದ ಇಟಗಿ, ಎಸ್ ಬಿ ಹಿರೇಮಠ, ಫಾಲಾಕ್ಷೀ ಗಣದಿನ್ನಿ, ಮಂಜುನಾಥ ಕಟ್ಟಿಮನಿ, ಧ್ರುವಕುಮಾರ ಹೂಗಾರ, ಕುರುವತ್ತೆಪ್ಪ ಅರಿಷಿನದ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಜೀನಾಮೆ ಪಡೆಯದಿದ್ದರೆ ಹೋರಾಟ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವರ್ಗಾವಣೆ ದಂಧೆಯಲ್ಲಿ ತೊಡಗಿ-ಕೊಂಡು, ಅಭಿವೃದ್ಧಿ ಕಾರ್ಯಗಳನ್ನು ಮರೆತು, ಭ್ರಷ್ಟಾಚಾರದಲ್ಲಿ ಮುಳಗಿದೆ ಎಂದು ಭಾರತೀಯ ಜನತಾ ಪಕ್ಷದ ಮುಂಡರಗಿ ಮಂಡಲ ಪ್ರಧಾನ ಕಾರ್ಯದರ್ಶಿ ದೇವಪ್ಪ ಇಟಗಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ಎಲ್ಲದಕ್ಕೂ ಸಾಕ್ಷಿ ಕೇಳುತ್ತಾರೆ. ಇದಕ್ಕಿಂತ ಬೇರೆ ಸಾಕ್ಷಿಯ ಅಗತ್ಯವಿಲ್ಲ. ಸಚಿವರ ಮೇಲೆ ಆರೋಪ ಬಂದ ಕೂಡಲೇ ಸಂಪುಟದಿಂದ ಕೈಬಿಡಬೇಕು.

ರಾಜೀನಾಮೆ ಪಡೆಯದಿದ್ದರೆ ಹೋರಾಟ ನಡೆಸುತ್ತೇವೆ. ಸಂಪುಟದಲ್ಲಿರುವ ಸಚಿವರೇ ಇನ್ನೂ ಒಂದು ವರ್ಷದವರಗೆ ಯಾವುದೇ ಅಭಿವೃದ್ಧಿ ಕಾರ್ಯಗಳು ಇಲ್ಲ ಎಂದು ಬಹಿರಂಗವಾಗಿ ಮಾತನಾಡುತ್ತಿದ್ದಾರೆ.

ಕೇವಲ ಲೂಟಿ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ನಾಗಾರಾಜು ಮುರಡಿ, ಚಂದ್ರಕಾಂತ ಮಟ್ಟಿ, ನಿಂಗಪ್ಪ ಹರಿಜನ ಉಪಸ್ಥಿತರಿದ್ದರು.

# ಗ್ರೂಪ್ ಮಟ್ಟದ ಕ್ರೀಡಾಕೂಟದಲ್ಲಿ ರಾಮಗೇರಿ ಶಾಲೆಗೆ ವೀರಾಗ್ರಣಿ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ




ಇಲ್ಲಿನ ಲಿಟಲ್ ಹಾರ್ಟ್ ಶಾಲೆಯಲ್ಲಿ ಮಂಗಳವಾರ ನಡೆದ ಗ್ರೂಪ್ 1ರ ಗ್ರೂಪ್ ಮಟ್ಟದ ಕ್ರೀಡಾಕೂಟದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮಗಿರಿಯ ವಿದ್ಯಾರ್ಥಿಗಳು ಭಾಗವಹಿಸಿ, ಗುಂಪು ಆಟಗಳಲ್ಲಿ ಬಾಲಕರ ಖೋಖೋ ಪ್ರಥಮ, ಬಾಲಕಿಯರ ಖೋಖೋ ಪ್ರಥಮ, ಬಾಲಕರ 4100 ಮೀ ರಿಲೇ ಪ್ರಥಮ, ಬಾಲಕಿಯರ 4100 ಮೀ ರಿಲೇ ಪ್ರಥಮ, ವೈಯಕ್ತಿಕ ವಿಭಾಗದಲ್ಲಿ ಶಿವಕುಮಾರ್ ಪೂಜಾರ್-100 ಮೀ. ಪ್ರಥಮ, ಮಾರುತಿ ಬೇವಿನಮರದ-100 ಮೀ ದ್ವಿತೀಯ, ಶಿವಕುಮಾರ್ ಪೂಜಾರ್-400 ಮೀ. ಪ್ರಥಮ, ಶಿವಕುಮಾರ್ ಪೂಜಾರ-80 ಮೀ ಹರ್ಡಲ್ಸ್ ಪ್ರಥಮ, ಮಾರುತಿ ಬೇವಿನಮರದ ಉದ್ದ ಜಿಗಿತ ಪ್ರಥಮ ಬಹುಮಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಬಸಮ್ಮ ಕುರಿ-200 ಮೀ. ಪ್ರಥಮ, ಬಸಮ್ಮ ಕುರಿ-400 ಮೀ. ಪ್ರಥಮ, ಸಿಂಧು ಪೂಜಾರ್ ಉದ್ದ ಜಿಗಿತ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಶಿವಕುಮಾರ್ ಪೂಜಾರ 100 ಮೀ, 400 ಮೀ, 80 ಮೀ ಹರ್ಡಲ್ಸ್‌ನಲ್ಲಿ ಪ್ರಥಮ ಸ್ಥಾನಗಳಿಸಿ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಗಳಿಸಿದ್ದು, ಶಾಲೆಯು ಗುಂಪು ಹಾಗೂ ವೈಯಕ್ತಿಕ ವಿಭಾಗಗಳಲ್ಲಿ ಪ್ರಶಸ್ತಿ ಗಳಿಸಿ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದಿದೆ.

ಸಾಧಕ ವಿದ್ಯಾರ್ಥಿಗಳಿಗೆ ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗ, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಗ್ರಾಮದ ಗುರುಹಿರಿಯರು ಶುಭ ಕೋರಿದ್ದಾರೆ.

# ವಿಧಿಯಾಟ ಬಲ್ಲವರಾರು...?

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ




ನನ್ನ ಧರ್ಮಪತ್ನಿಯ ತಮ್ಮ ಜಗದೀಶ್ ರೆಡ್ಡಿ ಕಳೆದ ರವಿವಾರ ಹೈದರಾಬಾದ್‌ನಲ್ಲಿ ಹೃದಯಸ್ತಂಭನದಿಂದ ಸಾವನಪ್ಪಿದ ನೋವಿನಿಂದ ಇನ್ನೂ ನನಗೆ ಹೊರಬರಲು ಆಗುತ್ತಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಕಂಬನಿ ಮಿಡಿದಿದ್ದಾರೆ.

ಅತ್ಯಂತ ಬುದ್ಧಿವಂತ, ಕ್ರಿಯಾಶೀಲ, ಸದಾ ಚಟುವಟಿಕೆಯಲ್ಲಿರುವ ಪ್ರತಿಭಾವಂತ ಇಂಜಿನಿಯರ್ ಆಗಿದ್ದ ಅವರು, ಕ್ರೀಡೆ ಎಂದರೆ ಆತನಿಗೆ ಅಚ್ಚುಮೆಚ್ಚು. ಪ್ರತಿ ದಿನ 8-10 ಕಿಲೋಮೀಟರ್ ಓಡುವ ಹವ್ಯಾಸ ಇಟ್ಟುಕೊಂಡಿದ್ದು, ಮುಂದಿನ ತಿಂಗಳ ಅಂತಾರಾಷ್ಟ್ರೀಯ ಮಟ್ಟದ ಮ್ಯಾರಥಾನ್‌ನಲ್ಲಿ ಭಾಗವಹಿಸಲು ಸಿದ್ಧತೆಯನ್ನ ಮಾಡಿಕೊಳ್ಳುತ್ತಿದ್ದ. ವಿಧಿ ಈ ಸಂತೋಷವನ್ನು ಹೆಚ್ಚು ಸಮಯ ಜಗದೀಶನಲ್ಲಿ ಬಿಡದೆ, ತನ್ನಲ್ಲಿಗೆ ಕರೆದುಕೊಂಡುಬಿಟ್ಟಿದೆ. ವಿಧಿ ನನ್ನ ಪ್ರೀತಿಯ ಜಗದೀಶನ ಆಟ-ಓಟ ನಿಲ್ಲಿಸಿ ತನ್ನ ಆಟವನ್ನು ಆಡಿ ಬಿಟ್ಟಿದೆ. ದೇವರು ಆಡಿಸಿದಂತೆ ಆಡುವ ಗೊಂಬೆಗಳು ನಾವೆಲ್ಲ. ನಮ್ಮೊಂದಿಗೆ ಇಲ್ಲಿಯವರೆಗೆ ಇದ್ದು, ನಮ್ಮೆಲ್ಲರಿಗೂ ಪ್ರೀತಿ ಹಂಚಿದ ಜಗದೀಶನ ಆತ್ಮಕ್ಕೆ ಆ ಭಗವಂತ ಚಿರಶಾಂತಿಯನ್ನ ದಯಪಾಲಿಸಲಿ. ಅವರ ಎಲ್ಲ ಕುಟುಂಬದವರಿಗೂ ನೋವು ಬರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೊರಟ್ಟಿಯವರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

**ಪುರಸಭೆಯ ಪ ಪೂ ಮಹಾವಿದ್ಯಾಲಯದ ಕಾರ್ಯಕ್ರಮದಲ್ಲಿ ಮಹೇಶ ಹೊಗೆಸೊಪ್ಪಿನ ಅಭಿಮತ**

# ಸಾಧಿಸುವ ತುಡಿತ ಎಲ್ಲರಲ್ಲಿ ಇರಲಿ



ಎಲ್ಲ ವಿದ್ಯಾರ್ಥಿಗಳಲ್ಲಿಯೂ ಸಾಕಷ್ಟು ಪ್ರತಿಭೆಯಿದೆ. ಆದರೆ ಅವರಲ್ಲಿರುವ ಕೀಳರಿಮೆಯಿಂದ ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಸಾಧನೆ ಮಾಡಬೇಕೆಂಬ ತುಡಿತ ಎಲ್ಲರಲ್ಲಿ ಬರಬೇಕು. ಕಾಲೇಜಿನ ಅನೇಕ ಚಟುವಟಿಕೆಗಳಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಪ್ರತಿಭೆ ಹೊರಹೊಮ್ಮಿಸಬೇಕು. ಪುರಸಭೆ ಕಾಲೇಜು ಪ್ರಾರಂಭವಾಗಿ 75 ವರ್ಷ ಗತಿಸಿದ್ದು, ಮತ್ತೆ ತನ್ನ ಗತವೈಭವಕ್ಕೆ ಬರುವಂತೆ ಮಾಡುವ ನಿಟ್ಟಿನಲ್ಲಿ ಪುರಸಭೆ ಸರ್ವರೀತಿಯಿಂದಲೂ ಸಹಕಾರ ನೀಡುತ್ತದೆ.

– ಮಹೇಶ ಹೊಗೆಸೊಪ್ಪಿನ.
ಪುರಸಭೆ ಸದಸ್ಯರು.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪ್ರೌಢಶಿಕ್ಷಣದ ನಂತರ ಕಾಲೇಜು ಜೀವನದಲ್ಲಿ ಉನ್ನತ ಭವಿಷ್ಯದ ಕಡೆಗೆ ಗುರಿಯನ್ನಿಟ್ಟು, ನಿಷ್ಠೆಯಿಂದ ಅಭ್ಯಾಸ ನಡೆಸುತ್ತ ಸಾಗಿದರೆ ಯಶಸ್ಸು ಸಾಧ್ಯವಾಗುತ್ತದೆ ಎಂದು ಪುರಸಭೆ ಸದಸ್ಯ ಮಹೇಶ ಹೊಗೆಸೊಪ್ಪಿನ ಹೇಳಿದರು.

ಅವರು ಪಟ್ಟಣದ ಪುರಸಭೆಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಮಂಗಳವಾರ 2023-24ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಅಶೋಕ ಕಳ್ಳಿಮನಿ ಮಾತನಾಡಿ, ಶಿಕ್ಷಕರಾದವರಿಗೆ ಮಕ್ಕಳು ಉತ್ತಮ ಸಾಧನೆ ಮಾಡಿದಾಗ ಮಾತ್ರ ಸಂತೃಪ್ತಿ. ವಿದ್ಯೆ ನೀಡುವ ಪ್ರತಿಯೊಬ್ಬ ಶಿಕ್ಷಕರನ್ನು ಗೌರವದಿಂದ ಕಾಣುವ ಗುಣವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಕಾಲೇಜು ಶಿಕ್ಷಣ ಪಡೆಯಲು ಬಂದಿರುವ ವಿದ್ಯಾರ್ಥಿಗಳಿಗೆ ಸಾಧನೆಯೊಂದೇ ಗುರಿಯಾಗಿರಲಿ ಎಂದು ಹೇಳಿದರು.

ಸದಸ್ಯರಾದ ಪ್ರವೀಣ ಬಾಳಿಕಾಯಿ, ಎಸ್ ಕೆ ಹವಾಲ್ದಾರ, ಬಸವರಾಜ ಓದುನವರ, ಗಂಗಾಧರ ಮೆಣಸಿನಕಾಯಿ, ಸಿದ್ದು ದುರಗಣ್ಣವರ ಮುಂತಾದವರು ಮಾತನಾಡಿದರು. ಜಯಕ್ಕ ಕಳ್ಳಿ, ರಾಮು ಗಡದವರ, ವಿಜಯ ಕರಡಿ, ರಾಜಣ್ಣ ಕುಂಬಿ, ಉಪನ್ಯಾಸಕರಾದ ಶಂಭು ಹುಳಕನವರ, ಪಿ ಡಿ ದೇಶಪಾಂಡೆ, ರಾಜೇಶ್ವರಿ ದೇಸಳ್ಳಿ, ಎನ್ ಬಿ ಹಿತ್ತಲಮನಿ, ಎಸ್ ವಾಯ್ ಮುದಗಲ್, ಎಂ ಬಿ ಬೂದಿಹಾಳ, ಕೆ ಎಂ ಮಸೂತಿ, ಎಸ್ ಎಸ್ ಉಮಚಗಿ, ಬಾಬು ಪಾಟೀಲ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು. ಎಸ್ ವ್ಹಿ ಹೊಸಳ್ಳಿಮಠ ನಿರೂಪಿಸಿದರು.

# ಸಚಿವ ಸಂತೋಷ್ ಲಾಡ್‌ರಿಗೆ ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ವಿಜಯನಗರದಿಂದ ಹುಬ್ಬಳ್ಳಿಗೆ ತೆರಳುವ ಸಂದರ್ಭದಲ್ಲಿ, ಗದಗ ತಾಲೂಕಿನ ಅಡವಿಸೋಮಾಪುರ ಗ್ರಾಮದಲ್ಲಿ ಭೇಟಿ ಮಾಡಿದ ಮುಖಂಡರು ಸನ್ಮಾನಿಸಿ, ಜಿಲ್ಲೆಯ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಸಂಯೋಜಕರಾದ ರಾಜು ಪೆಂಡಾರ್, ಕಾಂಗ್ರೆಸ್ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಯೂಸುಫ್ ಡಂಬಳ, ಮಲಿಕ್ ರೋಣ, ಘಾಸ್ಯ ಕಪಾಲಿ, ಹಾತಲಗೇರಿ ಗ್ರಾಮ ಪಂಚಾಯತ್ ಸದಸ್ಯರಾದ ವಿಠಲ ಬೆಂತುರ್, ರಾಜೇಸಾಬ ಹೊಸೂರ್, ಮಹಮ್ಮದ್ ನದಾಫ್, ಪ್ರಶಾಂತ್ ದುರಗಣ್ಣವರ ಮುಂತಾದವರಿದ್ದರು.

# ಅಸಭ್ಯ ಉಡುಗೆ ಧರಿಸಿದವರಿಗೆ ಪ್ರವೇಶ ನಿಷೇಧ

■ವಿಜಯಸಾಕ್ಷಿ ಸುದ್ದಿ, ಉತ್ತರಾಖಂಡ

ಉತ್ತರಾಖಂಡದ ಪ್ರಸಿದ್ಧ ಕೈಂಚಿ ಧಾಮ್ ದೇವಾಲಯದಲ್ಲಿ ಅಸಭ್ಯ ಉಡುಗೆಗಳನ್ನು ಧರಿಸುವ ಭಕ್ತರ ಪ್ರವೇಶವನ್ನು ನಿಷೇಧಿಸಲಾಗಿದೆ.

ತುಂಡು ಉಡುಗೆಗಳನ್ನು ಧರಿಸುವುದು 'ಅಗೌರವ' ಮತ್ತು 'ಅಸಭ್ಯ' ವರ್ತನೆ ಎಂದು ಹೇಳಲಾಗಿದೆ. ಇದಲ್ಲದೆ ದೇವಾಲಯದ ಒಳಗೆ ಫೋಟೊ ಕ್ಲಿಕ್ಕಿಸುವುದು ಮತ್ತು ವೀಡಿಯೊಗ್ರಫಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ದೇವಸ್ಥಾನದ ಟ್ರಸ್ಟ್ ಸಭೆಯ ಮೂಲಕ ಈ ನಿರ್ಧಾರವನ್ನು ಕೈಗೊಂಡಿದೆ.

ಬಳಿಕ ಕೈಂಚಿ ಧಾಮ್ ದೇವಸ್ಥಾನದ ಹೊರಗಡೆ ಬೋರ್ಡ್ ಹಾಕಲಾಗಿದೆ. ಬೋರ್ಡ್‌ನಲ್ಲಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ವಸ್ತ್ರಗಳ ನೀತಿಸಂಹಿತೆ ಬಗ್ಗೆ ಸೂಚನೆ ನೀಡಲಾಗಿದೆ.

ನೈನಿತಾಲ್‌ನಿಂದ 19 ಕಿಮೀ ದೂರದಲ್ಲಿ ಕೈಂಚಿ ಧಾಮ್ ದೇವಾಲಯ ಇದೆ.

ಕೈಂಚಿ ಧಾಮ ದೇವಾಲಯದ ಪ್ರವೇಶ ದ್ವಾರದಲ್ಲಿ ಅಳವಡಿಸಲಾಗಿರುವ ಬೋರ್ಡ್‌ನಲ್ಲಿ, "ಶ್ರೀ ಕೈಂಚಿ ಧಾಮದ ಪುಣ್ಯ ಕ್ಷೇತ್ರವನ್ನು ಸಂದರ್ಶಿಸಲು ಬರುವ ಎಲ್ಲಾ ಭಕ್ತರು ದೇವಾಲಯದ ಆವರಣವನ್ನು 'ಅಗೌರವ' ಮತ್ತು 'ಅಸಭ್ಯ' ಉಡುಪುಗಳನ್ನು ಧರಿಸಿ ಪ್ರವೇಶಿಸುವುದನ್ನು ನಿಷೇಧಿಸಿದೆ" ಎಂದು ಬರೆಯಲಾಗಿದೆ.




'ಕೂಸಿನ ಮನೆ' ಸಿಬ್ಬಂದಿಗಳ 4 ದಿನದ ತರಬೇತಿ ಕಾರ್ಯಕ್ರಮದಲ್ಲಿ ತಾಪಂ ಇಒ ರವಿ ಎ ಎನ್

# ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಿ

■ವಿಜಯಸಾಕ್ಷಿ ಸುದ್ದಿ, ರೋಣ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮನುಷ್ಯ ಪರ, ಮಕ್ಕಳ ಪರ ಹಾಗೂ ಮಹಿಳೆಯರ ಪರವಿದ್ದು, ಇದೀಗ ಗ್ರಾಮೀಣ ಪ್ರದೇಶ ಮಹಿಳಾ ಕೂಲಿಕಾರರ ಮಕ್ಕಳ ಪರ ವಿನೂತನ ಹೆಜ್ಜೆ ಇಟ್ಟಿದೆ. ಆರೈಕೆ ಸಿಬ್ಬಂದಿಗಳ ನಾಲ್ಕು ದಿನಗಳ ಕಾಲ ತರಬೇತಿ ಪಡೆದುಕೊಂಡು ರಾಜ್ಯ ಸರ್ಕಾರದ ನೂತನ ಕಾರ್ಯಕ್ರಮ 'ಕೂಸಿನ ಮನೆ' ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಿದಾಗ ಮಾತ್ರ ಸರ್ಕಾರದ ಕೂಸಿನ ಮನೆ ಕಾರ್ಯಕ್ರಮ ಯಶಸ್ವಿಯಾಗುತ್ತದೆ ಎಂದು ರೋಣ ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರವಿ ಎ ಎನ್ ಹೇಳಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನರೇಗಾ ಯೋಜನೆಯಡಿ ಮಂಗಳವಾರ ನಡೆದ ಗ್ರಾ ಪಂ ಮಟ್ಟದಲ್ಲಿ ಶಿಶುಪಾಲನ ಕೇಂದ್ರದ (ಕೂಸಿನ ಮನೆ) ನಿರ್ವಹಣೆಗಾಗಿ ನರಗುಂದ, ರೋಣ ಹಾಗೂ ಗಜೇಂದ್ರಗಡ ತಾಲೂಕಿನ 64 ಆರೈಕೆ ಸಿಬ್ಬಂದಿಗಳಿಗೆ ನಾಲ್ಕು ದಿನಗಳ ಕಾಲ ನಡೆಯುವ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.




ಕೂಸಿನ ಮನೆ ಕಾರ್ಯಕ್ರಮ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಗ್ರಾಮೀಣ ಪ್ರದೇಶಗಳ ಸಾಮಾನ್ಯ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಇಲಾಖೆಯಾಗಿದೆ. ಆರ್‌ಡಿಪಿಆರ್ ಇಲಾಖೆ ಮೂಲಕ ಜನರ ಪರವಾಗಿ ಇರುವ ಕಾರ್ಯಕ್ರಮ ಅನುಷ್ಠಾನಕ್ಕೆ ಬರುತ್ತವೆ. ಈ ಕೂಸಿನ ಮನೆ ಕಾರ್ಯಕ್ರಮವೂ ಅವುಗಳಲ್ಲೊಂದು.

ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮವನ್ನು ಗಜೇಂದ್ರಗಡ ತಾ ಪಂ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಡಾ. ಡಿ ಮೋಹನ್ ಅವರು ಸಸಿಗೆ ನೀರುಣಿಸುವುದರ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ನರೇಗಾ ಯೋಜನೆ ಗ್ರಾಮೀಣ ಮಹಿಳಾ ಕೂಲಿಕಾರರ ಕೇಂದ್ರಿತ ಯೋಜನೆಯಾಗಿದೆ. ಕೂಸಿನ ಮನೆ ಕಾರ್ಯಕ್ರಮ ಗ್ರಾಮೀಣ ಮಹಿಳೆಯರಿಗೆ ವರದಾನವಾಗಿದೆ. ಮಕ್ಕಳ ಲಾಲನೆ-ಪಾಲನೆ ಮಾಡುವುದು ಮಹಿಳೆಯರಿಗೆ ಪುಣ್ಯದ ಕೆಲಸವಾಗಿದೆ.

ಈ ತರಬೇತಿಯಲ್ಲಿ ಮಕ್ಕಳ ಲಾಲನೆ-ಪಾಲನೆ ಮಾಡುವುದನ್ನು ಆರೈಕೆ ಸಿಬ್ಬಂದಿಗಳು ಚೆನ್ನಾಗಿ ತಿಳಿದುಕೊಳ್ಳಬೇಕು. ಅಂದಾಗ ಮಾತ್ರ ತಮ್ಮ-ತಮ್ಮ ಗ್ರಾ ಪಂ ವ್ಯಾಪ್ತಿಗಳಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡಲು ಸಹಕಾರಿಯಾಗುತ್ತದೆ. ಈ ಮೂಲಕ ತಾಲೂಕು ಮತ್ತು ಜಿಲ್ಲೆಗೆ ಕೀರ್ತಿ ತರಬೇಕು ಎಂದು ಪ್ರೇರೇಪಣೆ ನೀಡಿದರು.

ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ತರಬೇತುದಾರರಾಗಿ ತಾಲೂಕಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕರಾದ ಮಂಜುಳಾ ಗುನಾರಿ ಹಾಗೂ ರಾಜೇಶ್ವರಿ ಮೇಟಿ, ಶಿಶುಪಾಲನಾ ಕೇಂದ್ರದಲ್ಲಿ ಆರೈಕೆ ಸಿಬ್ಬಂದಿಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಿದರು.

ನರಗುಂದ ತಾಲೂಕಾ ಐಇಸಿ ಸಂಯೋಜಕ ಸುರೇಶ ಬಾಳಿಕಾಯಿ, ಗಜೇಂದ್ರಗಡ ಐಇಸಿ ಸಂಯೋಜಕ ಮಂಜುನಾಥ ಹಳ್ಳದ, ರೋಣದ ಐಇಸಿ ಸಂಯೋಜಕ ಮಂಜುನಾಥ ಹಾಗೂ ರೋಣ ತಾ ಪಂ ಸಿಬ್ಬಂದಿಗಳು ಹಾಜರಿದ್ದರು. ಮಂಜುನಾಥ ಹಳ್ಳದ ಸ್ವಾಗತಿಸಿದರು. ಸುರೇಶ ಬಾಳಿಕಾಯಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

> ಈ ಕಾರ್ಯಕ್ರಮ ಅನುಷ್ಠಾನದ ಆರಂಭದಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಬರುತ್ತವೆ. ಆರೈಕೆ ಸಿಬ್ಬಂದಿಗಳು ಆ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ನಿರ್ಭೀತಿಯಿಂದ, ಸೇವಾ ಮನೋಭಾವದಿಂದ ಕೆಲಸ ಮಾಡಬೇಕು. ಕೂಸಿನ ಮನೆ ಕಾರ್ಯಕ್ರಮದಲ್ಲಿ ಸಮಾಜಕ್ಕೆ ಅನುಕೂಲವಾಗುವ ಕೆಲಸ ಮಾಡುಬೇಕು. ಸಾಮನ್ಯವಾಗಿ ನಿಮ್ಮ ಮಕ್ಕಳನ್ನು ನೀವು ನೋಡಿಕೊಳ್ಳುವುದು ಹೆಚ್ಚು ಹೊಣೆಗಾರಿಕೆಯಲ್ಲ. ಬೇರೆಯವರ ಮಕ್ಕಳನ್ನು ನೋಡಿಕೊಳ್ಳುವದು ಹೆಚ್ಚು ಹೊಣೆಗಾರಿಕೆಯಾಗಿದೆ. ಈ ಕೆಲಸದಲ್ಲಿ ಯಾರೂ ಹೆಚ್ಚು ಅತಂಕಪಡದೇ, ತರಬೇತಿ ಪಡೆದುಕೊಂಡು ಯೋಜನೆ ಯಶಸ್ವಿಗೊಳಿಸಿ.
>
> – ರವಿ ಎ ಎನ್.
>
> ತಾ ಪಂ ಕಾರ್ಯನಿರ್ವಾಹಕಾಧಿಕಾರಿ, ರೋಣ.



# ಪಟ್ಟಣವು ಶಾಂತಿ-ಸೌಹಾರ್ದತೆಯ ತವರೂರು

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಭಾರತ ದೇಶ ಕಲೆ-ಸಂಸ್ಕೃತಿಯ ತವರೂರಾಗಿದ್ದು, ಪ್ರತಿಯೊಬ್ಬರಲ್ಲೂ ಒಂದಲ್ಲ ಒಂದು ಕಲೆ ಅಡಗಿರುತ್ತದೆ ಎಂದು ರಾಮಣ್ಣಾ ಕಮಾಜಿ ಹೇಳಿದರು.

ಅವರು ಪಟ್ಟಣದ ಭೋಗೇರಿ ಓಣಿಯ ಮಾರುತಿ ಭಜನಾ ಹಾಗೂ ಸಾಂಸ್ಕೃತಿಕ ಸಂಘ ಇವರ ಸಹಯೋಗದಲ್ಲಿ ಮೊಹರಂ ಹಬ್ಬದ ನಿಮಿತ್ತ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮುಳಗುಂದ ಪಟ್ಟಣವು ಶಾಂತಿ-ಸೌಹಾರ್ದತೆಯ ತವರೂರು. ಇಲ್ಲಿನ ಸಾಕಷ್ಟು ಕಲಾವಿದರು ರಾಜ್ಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕಲೆಯ ಛಾಪನ್ನು ಮೂಡಿಸಿದ್ದಾರೆ. ಈ ಕಲೆಗಳನ್ನು ನಾವೆಲ್ಲರೂ ಉಳಿಸಿ-ಬೆಳೆಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರಮ್ಮಾ ಬಡ್ನಿ ವಹಿಸಿದ್ದರು. ಎಸ್ ಎಂ ನೀಲಗುಂದ, ಎನ್ ಆರ್ ದೇಶಪಾಂಡೆ, ಬಿ ವಿ ಸುಂಕಾಪೂರ, ಆರ್ ಸಿ ಕಮಾಜಿ, ಇಮಾಮಸಾಬ ಶೇಖ, ಎಂ ಎಂ ದೊಡ್ಡಮನಿ, ಎಸ್ ಸಿ ಬಡ್ನಿ, ಮಾಹಾದೇವಪ್ಪಾ ಗಡಾದ, ಕೆ ಎಲ್ ಕರಿಗೌಡರ, ಮಾಹಾಂತೇಶ ನೀಲಗುಂದ, ಹೊನ್ನಪ್ಪ ನೀಲಗುಂದ, ಅಶೋಕ ಹುಣಶಿಮರದ, ಗಂಗಪ್ಪಾ ಸುಂಕಾಪೂರ, ಶಂಭು ಅಕ್ಕಿ, ಅಬ್ದುಲ್‌ಖಾದರಸಾಬ ಹುಬ್ಬಳ್ಳಿ, ಸಿ ಎಸ್ ಪತ್ರಿ, ಹನುಮಂತಪ್ಪ ಗದುಗಿನ, ವೀರಭದ್ರಪ್ಪ ಕೆಂಚನಾಯ್ಕರ್, ಮಾಹಾಂತಪ್ಪ ಪತ್ರಿ, ಸನ್ಮಾನಿತರಾದ ಅಂದಾನಮ್ಮ ಬಳ್ಳಾರಿ, ನಮೀತಾ ಗುರಮ್ಮನವರ, ಗಂಗಮ್ಮಾ ಅವ್ವಣ್ಣವರ ಉಪಸ್ಥಿತರಿದ್ದರು.



# ಗದಗ ಜಿಲ್ಲಾ ಉಪ ನಿರ್ದೇಶಕ ಎಂ ಎ ರಡ್ಡೇರರಿಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ನೂತನವಾಗಿ ಅಧಿಕಾರ ಸ್ವೀಕರಿಸಿದ ಗದಗ ಜಿಲ್ಲಾ ಉಪ ನಿರ್ದೇಶಕ ಎಂ ಎ ರಡ್ಡೇರ ಅವರನ್ನು ಸಂಘದ ಜಿಲ್ಲಾಧ್ಯಕ್ಷ ಎಂ ಕೆ ಲಮಾಣಿ ನೇತೃತ್ವದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಂ ಕೆ ಲಮಾಣಿ, ಶ್ರೀಯುತರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಸ್ಪಂದಿಸುತ್ತಾ ಬಂದಿರುವುದು ನಮಗೆ ತಿಳಿದ ವಿಷಯ. ನಿಮ್ಮ ಅಧಿಕಾರ ಅವಧಿಯಲ್ಲಿ ಜಿಲ್ಲೆಯ ಎಲ್ಲಾ ಶಿಕ್ಷಕರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಎಲ್ಲಾ ಶಿಕ್ಷಕರನ್ನು ಒಗ್ಗೂಡಿಸಿಕೊಂಡು ಶಿಕ್ಷಣ ಇಲಾಖೆಗೆ ಒಳ್ಳೆಯ ಹೆಸರು ತರುವಂತಾಗಲಿ ಎಂದು ಆಶಿಸಿದರು.



ಈ ಸಂದರ್ಭದಲ್ಲಿ ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಜಿಲ್ಲಾ ಅಧಿಕಾರಿ ಡಾ. ಶರಣು ಗೋಗೇರಿ, ಜ. ತೋಂಟದಾರ್ಯ ಮಠದ ಆಡಳಿತಾಧಿಕಾರಿ ಶಿವಾನಂದ ಪಟ್ಟಣಶೆಟ್ಟರ, ಎ ಎಸ್ ಪಾಟೀಲ, ಬಿ ಡಿ ಯರಗೊಪ್ಪ, ಡಿ ಎನ್ ಮರಡ್ಡಿ, ಆರ್ ವಿ ಗೊಂಡಬಾಳ, ಎಚ್ ಟಿ ಬಿಜ್ಜೂರ, ಎಲ್ ಎಸ್ ಅರಳಿಹಳ್ಳಿ, ಬಿ ಸಿ ಗುಳೇದ, ಸಂಜೀವ ಪೂಜಾರ, ಮಂಜುನಾಥ ತೆಗ್ಗಿನಮನಿ, ಪಿ ಎನ್ ಹಿರೇಮಠ, ವಿಶ್ವನಾಥ ಮಾನೆ, ಎಫ್ ಎಂ ಜವಳಿ, ಪಿ ಆರ್ ನಾಯಕ, ಝಡ್ ಎಂ ಖಾಜಿ, ಎ ಆಯ್ ಶೇಖ, ಎಸ್ ಬಿ ಬೂದಿಹಾಳ, ಗಿರೀಶ ಸೂರಜಾನವರ, ಸುನೀಲ ಲಮಾಣಿ ಸೇರಿದಂತೆ ಸಂಘದ ಪದಾಧಿಕಾರಿಗಳು, ಶಿಕ್ಷಕರು ಉಪಸ್ಥಿತರಿದ್ದರು.

# ಹಂಚಿನಾಳ ನರ್ಸಿಂಗ್ ಕಾಲೇಜಿನಲ್ಲಿ ಸ್ತನ್ಯಪಾನ ಅರಿವು ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕೆ ವಿ ಹಂಚಿನಾಳ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ 'ವಿಶ್ವ ಸ್ತನ್ಯಪಾನ ಸಪ್ತಾಹ'ದ ಅಂಗವಾಗಿ ಪ್ರಥಮ ವರ್ಷದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಸ್ತನ್ಯಪಾನದ ಕುರಿತು ಅರಿವು ಮೂಡಿಸಲಾಯಿತು.

ಕಾಲೇಜಿನ ಮುಖ್ಯಸ್ಥರಾದ ಡಾ. ವೀರೇಶ ಹಂಚಿನಾಳ ಮಾತನಾಡಿ, ಶುಶ್ರೂಶಕ ಹಾಗೂ ಅರೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ತನ್ಯಪಾನದ ಪ್ರಾಮುಖ್ಯತೆ, ಮಗುವಿಗೆ ಅದರಿಂದಾಗುವ ಪ್ರಯೋಜನಗಳನ್ನು ವಿವರಿಸಿ, ಪ್ರತಿಯೊಂದು ಹೆಣ್ಣು ಸ್ತನ್ಯಪಾನದ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಇದು ಹೆಣ್ಣಿನ ಹಕ್ಕು ಕೂಡಾ ಆಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಶಿವರಾಜ್ ಅಣ್ಣಿಗೇರಿ, ಸಿಬ್ಬಂದಿಗಳಾದ ವೇದಶ್ರೀ ದಡೂತಿ, ಲಕ್ಷ್ಮೀಕಾಂತ್ ಕಂಬದ, ಸುಧಾ ಸೊಪ್ಪಿನ, ನಯನಾ ಬೇಗಂ, ಸಚಿನ್ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




# ಮಹಿಳೆಯರು ತಮ್ಮ ಆರೋಗ್ಯದ ಕಾಳಜಿ ವಹಿಸಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಬಾಣಂತಿಯರು, ಗರ್ಭಿಣಿಯರು ತಮ್ಮ ಆರೋಗ್ಯದ ಕುರಿತು ಕಾಳಜಿ ವಹಿಸಬೇಕು ಎಂದು ಆರೋಗ್ಯ ಮತ್ತು ಕ್ಷೇಮ ಕೇಂದ್ರ ಮುಳಗುಂದದ ಸಮುದಾಯ ಆರೋಗ್ಯಾಧಿಕಾರಿ ಯಶೋದಾ ವಂಟೆಲಿ ಹೇಳಿದರು.

ಅವರು ಪಟ್ಟಣದ ಅಂಗನವಾಡಿ ಸಂಖ್ಯೆ 140ರಲ್ಲಿ ಮಹಿಳೆಯರಿಗೆ, ಬಾಣಂತಿಯರಿಗೆ, ಗರ್ಭಿಣಿಯರಿಗೆ ವಯೋವೃದ್ಧರಿಗೆ ಕಾಣಿಸಿಕೊಳ್ಳುವ ಅಸಾಂಕ್ರಾಮಿಕ ರೋಗಗಳು ಮತ್ತು ಮಧುಮೇಹ, ರಕ್ತದೊತ್ತಡ, ರೋಗಗಳ ತಪಾಸಣೆ ನಡೆಸಿ ಮಾತನಾಡಿ, ಮಹಿಳೆಯರು ಹೆಚ್ಚು ಹೆಚ್ಚು ಆರೋಗ್ಯದ ಕಡೆ ಗಮನ ನೀಡಬೇಕು. ಇದರಿಂದ ಕುಟುಂಬದ ಆರೋಗ್ಯದೊಂದಿಗೆ ಸಮುದಾಯದ ಆರೋಗ್ಯ ಕಾಪಾಡಿದಂತಾಗುತ್ತದೆ ಎಂದರು. ಆರೋಗ್ಯ ಸಿಬ್ಬಂದಿ ಮಂಜು, ಪೂಜಾ, ಅಂಗನವಾಡಿ ಶಿಕ್ಷಕಿ ಪುಷ್ಪಾ ಮಾದಮ್ಮನವರ, ಸಹಾಯಕಿ ಗೌರಮ್ಮಾ ನವಲಿ, ರೇಷ್ಮಾ ದಲೀಲ, ಮನ್ನಮ್ಮಾ ದಲೀಲ, ರಾಜೇಸಾಬ ದಲೀಲ, ಬುಡ್ಡೆಸಾಬ ದಲೀಲ, ನಝೀರ ತಹಸೀಲ್ದಾರ, ಅನುಸೂಯಾ ಹಿರೇಮಠ, ಶಾಂತಮ್ಮಾ ಮಟ್ಟಿ, ನಿರ್ಮಲಾ ಲಾಳಿ, ಶಶಿಕಲಾ ಗೌರಿಮನಿ, ಬಸಮ್ಮಾ ನಪೂರಿಮಠ, ಪ್ರಭಯ್ಯ ಓದುಮಠ, ಸರಳಾ ಹಿರೇಮಠ ಇದ್ದರು.

# ತಾಯಿಯ ಎದೆಹಾಲು ಅಮೃತಕ್ಕೆ ಸಮಾನ




■ವಿಜಯಸಾಕ್ಷಿ ಸುದ್ದಿ, ಗದಗ

ಸ್ತನ್ಯಪಾನವು ನವಜಾತ ಶಿಶುವಿನ ಮೊದಲ ಲಸಿಕೆಯಾಗಿದೆ. ಇದು ಪ್ರಮುಖ ಪ್ರತಿಕಾಯಗಳು ಮತ್ತು ರೋಗನಿರೋಧಕ ಶಕ್ತಿಯನ್ನು ಒದಗಿಸುತ್ತದೆ. ಆದ್ದರಿಂದ, ಹಾಲುಣಿಸುವ ತಾಯಿಯು ಪ್ರತಿ ಹೆರಿಗೆಯ ನಂತರದ ಒಂದು ಗಂಟೆಯೊಳಗೆ ಎದೆಹಾಲನ್ನು ನೀಡಬೇಕು ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಬಿ ಸಿ ಕರಿಗೌಡರ್ ಹೇಳಿದರು.

ರೋಟರಿ ಸಂಸ್ಥೆ ಗದಗ-ಬೆಟಗೇರಿಯು ಇಲ್ಲಿನ ದುಂಡಪ್ಪ ಮಾನ್ವಿ ಮಹಿಳೆಯರ ಮತ್ತು ಚಿಕ್ಕಮಕ್ಕಳ ಆಸ್ಪತ್ರೆಯಲ್ಲಿ ಆಚರಿಸಿದ 'ಸ್ತನ್ಯಪಾನ ಸಪ್ತಾಹ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನವಜಾತ ಶಿಶುಗಳಿಗೆ ಜನನವಾದ ಮೊದಲ ಗಂಟೆಯೊಳಗೆ ತಾಯಿಯ ಎದೆಹಾಲು ಕುಡಿಸುವುದರಿಂದ ಶಿಶುವಿಗೆ ಸಾವಿನ ವಿರುದ್ಧ ರಕ್ಷಣೆ ನೀಡುತ್ತದೆ. ವಾಸ್ತವವಾಗಿ, ಸ್ತನ್ಯಪಾನ ಬಗ್ಗೆ ಸರಿಯಾದ ಮಾಹಿತಿ ನೀಡಿ, ಎದೆಹಾಲು ನೀಡುವಂತೆ ಜಾಗೃತಿ ಮೂಡಿಸುವುದರಿಂದ ಪ್ರತಿ ವರ್ಷ ಐದು ವರ್ಷದೊಳಗಿನ ಸುಮಾರು 8,23,000 ಮಕ್ಕಳ ಜೀವಗಳನ್ನು ಉಳಿಸಬಹುದೆಂದು ಮಾಹಿತಿ ನೀಡಿದರು.

ಡಾ. ಕಮಲಾಕ್ಷಿ ಅಂಗಡಿ ಮಾತನಾಡಿ, ತಾಯಿ ಮತ್ತು ಮಗುವಿಗೆ ಹಾಲುಣಿಸುವ ಪ್ರಯೋಜನಗಳ ಕುರಿತು ತಿಳಿಸಿ, ಎದೆಹಾಲಿನೊಂದಿಗೆ ನೈಸರ್ಗಿಕ ಆಹಾರಗಳನ್ನು ಪ್ರೋತ್ಸಾಹಿಸಬೇಕು. ನವಜಾತ ಶಿಶುಗಳು ಎದೆಹಾಲಿನಿಂದ ವಂಚಿತರಾಗಬಾರದು ಎಂದುರು.

ಸಂಸ್ಥೆಯ ಕಾರ್ಯದರ್ಶಿ ವೀಣಾ ತಿರ್ಲಾಪುರ, ಅಧ್ಯಕ್ಷ ಚಂದ್ರಮೌಳಿ ಜಾಲಿ ಮಾತನಾಡಿದರು. ರೋಟರಿ ಸಂಸ್ಥೆಯ ವತಿಯಿಂದ ಹಾಲುಣಿಸುವ ತಾಯಂದರಿಗೆ ಪೌಷ್ಟಿಕಾಂಶಯುಕ್ತ ಆಹಾರಗಳ ಕಿಟ್ ವಿತರಿಸಲಾಯಿತು. ಕಿಟ್‌ನ ಪ್ರಾಯೋಜಕತ್ವವನ್ನು ಸಂಸ್ಥೆಯ ಸದಸ್ಯ ಶ್ರೀಧರ್ ಧರ್ಮಾಯತ್, ಎಸ್ ಎಸ್ ಹೊಸಳ್ಳಿಮಠ ವಹಿಸಿಕೊಂಡಿದ್ದರು. ಸಂಸ್ಥೆಯ ಸದಸ್ಯರಾದ ಎಚ್ ಎಸ್ ಪಾಟೀಲ್, ಡಾ. ಪ್ರದೀಪ ಉಗಲಾಟ, ವಿಶ್ವನಾಥ ಯಲಮಳ್ಳಿ, ಶ್ರೀಧರ ಸುಲ್ತಾನಪುರ ಉಪಸ್ಥಿತರಿದ್ದರು. ಕಾರ್ಯದರ್ಶಿ ವೀಣಾ ತಿರ್ಲಾಪುರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ವಿಶ್ವಕರ್ಮ ಮಹಾಸಭಾದ ಪದಾಧಿಕಾರಿಗಳ ಪದಗ್ರಹಣ

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ರಾಜ್ಯಾಧ್ಯಕ್ಷ, ವಿ ಪ ಸದಸ್ಯ ಕೆ ಪಿ ನಂಜುಂಡಿ ವಿಶ್ವಕರ್ಮ ಅವರ ಆದೇಶದನ್ವಯ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಗದಗ ಜಿಲ್ಲಾ ಘಟಕ ವಿಶ್ವಕರ್ಮ ವತಿಯಿಂದ ಸೋಮವಾರ ನಗರದ ಒಕ್ಕಲಗೇರಿ ಓಣಿ, ಗಂಜಿ ಬಸವೇಶ್ವರ ಸರ್ಕಲ್ ಹತ್ತಿರದ ಶ್ರೀ ಕಾಳಿಕಾದೇವಿ ದೇವಸ್ಥಾನದ ಆವರಣದಲ್ಲಿ ಜಿಲ್ಲಾಮಟ್ಟದ ನೂತನ ಪದಾಧಿಕಾರಿಗಳ ಸಾಮಾನ್ಯ ಸಭೆ ಹಾಗೂ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಜರುಗಿತು.



ಕಾರ್ಯಕ್ರಮವನ್ನು ಉದ್ದೇಶಿಸಿ ಗದಗ ಜಿಲ್ಲಾ ಘಟಕದ ಗೌರವಾಧ್ಯಕ್ಷ ರಾಮಣ್ಣ ಕಮ್ಮಾರ ಮಾತನಾಡಿ, ಜಿಲ್ಲೆಯಲ್ಲಿ ಸಂಘವು ಮುಂದಿನ ದಿನಗಳಲ್ಲಿ ಮಾಡಬೇಕಾದ ಕಾರ್ಯ ಚಟುವಟಿಕೆಗಳು, ಸಂಘಟನೆ, ಹೋಬಳಿ ಮಟ್ಟದ ಎಸ್‌ಟಿ ಮೀಸಲಾತಿ, ಜನಜಾಗೃತಿ ಸಮಾವೇಶಗಳ ಕುರಿತು, ಜಿಲ್ಲೆಯಲ್ಲಿ ಹಮ್ಮಿಕೊಳ್ಳಬೇಕಾದ ಬೃಹತ್ ಜನಜಾಗೃತಿ ಸಮಾವೇಶ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಮಹಾಸಭಾದ ಗದಗ ಜಿಲ್ಲಾಧ್ಯಕ್ಷ ದೇವೇಂದ್ರಪ್ಪ ಬಡಿಗೇರ ಮಾತನಾಡಿ, ನಮ್ಮ ಸಂಘಕ್ಕಾಗಿ ಶ್ರಮಿಸುತ್ತಿರುವ ಪದಾಧಿಕಾರಿಗಳು ಉತ್ತಮ ಕೆಲಸವನ್ನು ಮಾಡಿ, ಸಂಘಕ್ಕೆ ಚ್ಯುತಿ ಬರದ ಹಾಗೆ ನಡೆದುಕೊಳ್ಳಬೇಕೆಂದರು.

ಘಟಕದ ಗೌರವಾಧ್ಯಕ್ಷ ರಾಮಣ್ಣ ಕಮ್ಮಾರ, ಅಧ್ಯಕ್ಷ ದೇವಿಂದ್ರಪ್ಪ ಬಡಿಗೇರ, ಖಜಾಂಚಿ ಮೌನೇಶ ಬಡಿಗೇರ, ಕಾಳಪ್ಪ ಬಡಿಗೇರ, ಯುವ ಘಟಕ ಅಧ್ಯಕ್ಷರಾದ ಆನಂದ ಕಮ್ಮಾರ, ವೀರಭದ್ರಪ್ಪ ಬಡಡಿಗೇರ, ಶ್ರೀಧರ ಬಡಿಗೇರ, ಶಂಕರ ಪತ್ತಾರ, ಮಹೇಶ ಬಡಿಗೇರ, ಕಾಳಪ್ಪ ಹನುಮಪ್ಪ ಜೋಗಿನ (ಶ್ಯಾಗೋಟಿ), ವೀರಭದ್ರಪ್ಪ ಕೆ. ಕಮ್ಮಾರ, ಗಂಗಾಧರ ಪತ್ತಾರ, ಬಸವರಾ ಪತ್ತಾರ, ಚೇತನ ಹುಲಬಜಾರ, ದ್ಯಾಮಣ್ಣ ಪತ್ತಾರ, ಮಹಾಲಿಂಗಪ್ಪ ವಿ. ಬಡಿಗೇರ, ಕಾಳಪ್ಪ ಬಡಿಗೇರ, ದೇವಿಂದ್ರಪ್ಪ ಪತ್ತಾರ, ಸುಧೀರ ಬಡಿಗೇರ, ಕೇಶಪ್ಪ ಕಮ್ಮಾರ, ಶಿವಪ್ಪ ಕಮ್ಮಾರ, ಮುಂಜನಾಥ ಬಡಿಗೇರ, ವಿಜಯ ಬಡಿಗೇರ, ದೇವಪ್ಪ ಬಡಿಗೇರ, ಈರಣ್ಣ ಹಲವಾಗಲು, ಶ್ರೀಕಾಂತ ಕಮ್ಮಾರ, ರಾಮಚಂದ್ರಪ್ಪ ಬಡಿಗೇರರ, ಕೃಷ್ಣಾ ಬಡಿಗೇರ, ಮಾನಪ್ಪ ಬಡಿಗೇರ, ಶಿವು ಬಡಿಗೇರ, ಈಶ್ವರಪ್ಪ ಶಿರಸಂಗೀ, ಶಂಕ್ರಪ್ಪ ಹಾಲಪ್ಪ ಕಮ್ಮಾರ, ನಿಂಗರಾಜ ಕಮ್ಮಾರ, ಮೌನೇಶ ಪತ್ತಾರ ಉಪಸ್ಥಿತರಿದ್ದರು.

ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಸಮಾಜದ ಎಲ್ಲ ಸ್ವಾಮೀಜಿಗಳಿಗೆ ಮಹಾಂತಪ್ಪಗಳು ಆದರ್ಶಪ್ರಾಯರು



■ವಿಜಯಸಾಕ್ಷಿ ಸುದ್ದಿ, ಗದಗ

ದುಶ್ಚಟಗಳಿಂದ ಜನರು ಆರೋಗ್ಯ, ಸಂಪತ್ತು, ಜೀವನ ಎಲ್ಲವನ್ನೂ ಹಾಳು ಮಾಡಿಕೊಳ್ಳುತ್ತಿದ್ದಾರೆ. ದುಶ್ಚಟಗಳ ನಿವಾರಣೆಗೆ ನಾಡಿನಾದ್ಯಂತ ಹಳ್ಳಿ ಹಳ್ಳಿಗೆ, ಮನೆ ಮನೆಗೆ ಸಂಚರಿಸಿ ದುರ್ವ್ಯಸನಗಳನ್ನು ತಮ್ಮ ಮಹಾಂತಜೋಳಿಗೆಗೆ ಹಾಕಿಸಿಕೊಂಡು ಸಮಾಜದ ಸ್ವಾಸ್ಥ್ಯವನ್ನು, ಜನರ ಬದುಕನ್ನು ಸಂರಕ್ಷಿಸಿದ ಶ್ರೇಯಸ್ಸು ಇಲಕಲ್ ಲಿಂಗೈಕ್ಯ ಪೂಜ್ಯಶ್ರೀ ಮಹಾಂತಪ್ಪಗಳವರದು ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ತಿಳಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2653ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಇಲಕಲ್ ಮಹಾಂತಪ್ಪಗಳು ಬಸವತತ್ವದ ದಂಡನಾಯಕರೆನಿಸಿದ್ದರು. ಬಸವತತ್ವವನ್ನು ನೇರ ನಿಷ್ಠುರವಾಗಿ, ಪ್ರಾಮಾಣಿಕವಾಗಿ ಪ್ರಸಾರ ಮಾಡಿದ್ದಾರೆ. ಅಸಮಾನತೆಯಿಂದ ತುಂಬಿದ ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಬಿತ್ತಿ, ಶೋಷಣೆ, ಮೂಢನಂಬಿಕೆ, ಅಂಧಶ್ರದ್ಧೆ, ಬಹುದೇವೋಪಾಸನೆಗಳಿಂದ ಮುಕ್ತವಾದ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಈ ದಿಶೆಯಲ್ಲಿ ಸಮಾಜದ ಎಲ್ಲ ಸ್ವಾಮಿಜಿಗಳಿಗೆ ಮಹಾಂತಪ್ಪಗಳು ಆದರ್ಶಪ್ರಾಯರು ಮತ್ತು ಮಾದರಿ ಎಂದು ಶ್ರೀಗಳು ಹೇಳಿದರು.

ಜಿಮ್ಸ್‌ನ ಸಹಾಯಕ ಪ್ರಾಧ್ಯಾಪಕ ಡಾ. ಅರವಿಂದ ಕರಿನಾಗಣ್ಣನವರ ಮಾತನಾಡಿ, ತಂಬಾಕು ಸೇವನೆಯಿಂದ ಪ್ರತಿವರ್ಷ 60-70 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ನಮ್ಮ ಜೀವನಶೈಲಿ ಮತ್ತು ಆಹಾರಪದ್ಧತಿಯಿಂದ ಮನುಷ್ಯನ ಜೀವಿತಾವಧಿ ಕ್ರಮೇಣ ಕ್ಷೀಣಿಸುತ್ತಿದೆ. ದುಶ್ಚಟಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿವರಿಸುತ್ತಾ ಬಂದಿದ್ದು, ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ಇನ್ನೂ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು.

ಲಿಂಗೈಕ್ಯ ಪೂಜ್ಯ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜಯಂತಿ ಪ್ರಯುಕ್ತ 'ವ್ಯಸನ ಮುಕ್ತ ದಿನಾಚರಣೆ' ಮತ್ತು ಗುಡಗುಂಟಿಯ ಶಿವಣ್ಣ ಶರಣರು ರಚಿಸಿದ 'ಶರಣಧರ್ಮ ಪ್ರವಚನ ರೂಪು-ರೇಷೆ ಭಾಗ-2' ಕೃತಿಯ ಲೋಕಾರ್ಪಣೆ ಜರುಗಿತು.

ವೈದ್ಯಶ್ರೀ ಪ್ರಶಸ್ತಿಗೆ ಭಾಜನರಾದ ಡಾ. ಶ್ವೇತಾ ಪ್ರಕಾಶ ಸಂಕನೂರ, ಗದಗ, ಕೃಷಿ ಇಂಜಿನಿಯರಿಂಗ್ ವಿಭಾಗದಲ್ಲಿ ಬಂಗಾರದ ಪದಕಗಳನ್ನು ಪಡೆದ ಕಾಮಾಕ್ಷಿ ಎಸ್ ಚಾಗಿ ಬೆಟಗೇರಿ, ಶಿಕ್ಷಣ ಇಲಾಖೆಯಲ್ಲಿ ವಿಷಯ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ವಿ ಎಂ ಮೆಣಸಿನಕಾಯಿ ಅವರನ್ನು ಸನ್ಮಾನಿಸಲಾಯಿತು.

ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ ಸುತಾರ ವಚನ ಸಂಗೀತ ಪ್ರಸ್ತುತಪಡಿಸಿದರು. ಸೋನಾಕ್ಷಿ ಆರ್ ಪವಾರ ಧರ್ಮಗ್ರಂಥ ಪಠಣಗೈದರು. ವೈಭವಿ ಪಿ ಕಲಬುರ್ಗಿ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ಶರಣೆ ಲಿಂ. ಬಸವಲಿಂಗಮ್ಮ ಮಲ್ಲಣ್ಣ ದೇಸಾಯಿ ಅವರ ಸ್ಮರಣೆಯಲ್ಲಿ ಕುಟುಂಬದ ಸದಸ್ಯರು ಮತ್ತು ಶಿವಣ್ಣ ಯರಾಶಿ ಸಲ್ಲಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು.

ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

> ಲಿಂ. ಮಹಾಂತಪ್ಪಗಳು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ 45 ವರ್ಷಗಳವರೆಗೆ ನಿರಂತರ ನಾಡಿನಾದ್ಯಂತ ಸಂಚರಿಸಿ ದುಶ್ಚಟಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡಿದ್ದಾರೆ. ಜೋಳಿಗೆಗೆ ದವಸ, ಧಾನ್ಯ, ದುಡ್ಡನ್ನು ಹಾಕಿಸಿಕೊಳ್ಳದೇ ಜನರಲ್ಲಿರುವ ದುಶ್ಚಟಗಳನ್ನು ಭಿಕ್ಷೆಯಾಗಿ ಪಡೆದು ವ್ಯಸನಮುಕ್ತರನ್ನಾಗಿಸಿದ್ದಾರೆ. ಅಪೌಷ್ಟಿಕವಾದ ಆಹಾರಗಳನ್ನು ಸೇವಿಸುವುದು ಇಂದು ಕೆಟ್ಟ ಚಟವಾಗಿ ಪರಿಣಮಿಸಿದೆ. ಇದರಿಂದ ಸಾಕಷ್ಟು ಜನರು ಬೇಗನೆ ಹೃದಯಾಘಾತ, ಸಕ್ಕರೆ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಸಂಘ-ಸಂಸ್ಥೆಗಳು, ಶಾಲಾ-ಕಾಲೇಜುಗಳು, ಮಠಮಾನ್ಯಗಳು ದುಶ್ಚಟಗಳ ನಿವಾರಣೆಗಾಗಿ ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗಬೇಕು.
>
> – **ಪೂಜ್ಯ ಶ್ರೀ ಗುರುಮಹಾಂತ ಶ್ರೀಗಳು,** ಇಲಕಲ್.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka